ನಿಮ್ಮೂರು ಸುದ್ದಿ

ಕನ್ನಡ ದಿನ ಪತ್ರಿಕೆ

NIMMURU SUDDI

ಸಂಪಾದಕರು: ಸುಂದರ್

Editor : Sundar

ಏಕ ಕಾಲಕ್ಕೆ
ಬಳ್ಳಾರಿ,
ಕೊಪ್ಪಳ,
ಯಾದಗಿರಿ,
ರಾಯಚೂರು,
ಕಲಬುರ್ಗಿ,
ಬೀದರ,
ವಿಜಯನಗರ
ಜಿಲ್ಲೆಗಳಲ್ಲಿ ಪ್ರಕಟ

Volume: 01, Issue: 117 RNI Number : KNKAN/25/A2770 06-05-2026 Wednesday Page 04, Price 2/- suddinimmuru@gmail.com Mob:-8660146563

ಸಂಪುಟ :01 ಸಂಚಿಕೆ :117 ರಾಯಚೂರು 06-05-2026 ಬುಧವಾರ ಪುಟ 04 ಬೆಲೆ ರೂ.2/- ಮೊ:8660146563

ಸಿಎಂ ಸ್ಥಾನಕ್ಕೆ ರಾಜೀನಾಮೆ ನೀಡಲ್ಲ, ಅಕ್ರಮವಾಗಿ ಗೆಲುವು ಸಾಧಿಸಿದ ಬಿಜೆಪಿ

ಕೋಲ್ಕತ್ತಾ (ಪಶ್ಚಿಮಬಂಗಾಳ): ವಿಧಾನಸಭೆ ಚುನಾವಣೆಯಲ್ಲಿ ಹೀನಾಯ ಸೋಲು ಕಂಡರೂ ಟಿಎಂಸಿ ನಾಯಕಿ ಮಮತಾ ಬ್ಯಾನರ್ಜಿ ಅವರು ಸಿಎಂ ಸ್ಥಾನಕ್ಕೆ ರಾಜೀನಾಮೆ ನೀಡುವುದಿಲ್ಲ ಎಂದು ಹೇಳಿದ್ದಾರೆ.

ಕೋಲ್ಕತ್ತಾದಲ್ಲಿ ಇಂದು ಮಾಧ್ಯಮಗೋಷ್ಠಿ ನಡೆಸಿ ಮಾತನಾಡಿದ ಅವರು, ನಮ್ಮ ಪಕ್ಷವನ್ನು (ಟಿಎಂಸಿ) ಬಲವಂತವಾಗಿ ಸೋಲಿಸಲಾಗಿದೆ. ಇದು ಬಿಜೆಪಿಯ ನಿಜವಾದ ಗೆಲುವಲ್ಲ. ಅಕ್ರಮ, ಅನೈತಿಕವಾಗಿ ಚುನಾವಣೆ ನಡೆಸಲಾಗಿದೆ. ನಾನು ಭವಾನಿಪುರದಲ್ಲಿ ಗೆದ್ದಿದ್ದರೂ ಸೋಲಿಸಲಾಗಿದೆ ಎಂದು ಆರೋಪಿಸಿದ್ದಾರೆ.

ಬಿಜೆಪಿ ಪ್ರಜಾಪ್ರಭುತ್ವದ ಮಾದರಿಯಲ್ಲಿ ನಿಜವಾಗಿಯೂ ಗೆದ್ದಿದ್ದರೆ, ಯಾವುದೇ ತಕರಾರು ಇರಲಿಲ್ಲ. ಸೋಲು- ಗೆಲುವು ಚುನಾವಣೆಗಳ ಭಾಗ. ನಿಯಮಾನುಸಾರ ಗೆಲ್ಲದ ಕಾರಣ, ನಾನು ಸಿಎಂ ಸ್ಥಾನಕ್ಕೆ ರಾಜೀನಾಮೆ ನೀಡುವುದಿಲ್ಲ. ನಮ್ಮ ಪಕ್ಷವು ಒಗ್ಗಟ್ಟಾಗಿದೆ. ಎಲ್ಲರೂ ಒಟ್ಟಾಗಿ ಕೆಲಸ ಮಾಡುತ್ತಿದ್ದಾರೆ ಎಂದು ಅವರು ಹೇಳಿದರು.

ನನಗೆ ಕುರ್ಚಿಯಲ್ಲ, ಜನರು ಮುಖ್ಯ: ಭವಾನಿಪುರದಲ್ಲಿ ಸೋತಿದ್ದು ವಿಧಾನಸಭೆ ಪ್ರವೇಶಿಸಲು ಉಪ ಚುನಾವಣೆಯಲ್ಲಿ ಸ್ಪರ್ಧೆ ಮಾಡುತ್ತೀರಾ ಎಂಬ ಮಾಧ್ಯಮಗಳ ಪ್ರಶ್ನೆಗೆ ಉತ್ತರಿಸಿದ ಅವರು, ನಾನು ವಿಧಾನಸಭೆಗೆ ಹೋಗುವುದಿಲ್ಲ. ನನ್ನನ್ನು ಬಲವಂತವಾಗಿ ಸೋಲಿಸಲಾಗಿದೆ. ನನಗೆ ಕುರ್ಚಿಯ ಬಗ್ಗೆ ಕಾಳಜಿ ಇಲ್ಲ. ಜನರ ಬಗ್ಗೆ ಕಾಳಜಿ ಇದೆ. ನಾನು ಈಗ ಸ್ವತಂತ್ರಳಾಗಿದ್ದೇನೆ. ಬೀದಿಯಲ್ಲಿದ್ದೇನೆ, ಇಲ್ಲಿಯೇ ಇರುತ್ತೇನೆ ಎಂದು ಹೇಳಿದರು.

ಪಕ್ಷದ ಕಚೇರಿಗಳ ಮೇಲೆ ದಾಳಿ ಖಂಡನೀಯ: ಇನ್ನು, ತಮ್ಮ ಪಕ್ಷದ ಕಚೇರಿಗಳ ಮೇಲೆ ಅಲ್ಲಲ್ಲಿ ನಡೆಯುತ್ತಿರುವ ದಾಳಿಯನ್ನು ಖಂಡಿಸಿದರು. ಬಿಜೆಪಿ ಕಾರ್ಯಕರ್ತರು ನಮ್ಮ ಕಚೇರಿಗಳನ್ನು ಗುರಿಯಾಗಿಸಿಕೊಂಡು ದಾಳಿ ಮಾಡುತ್ತಿದ್ದಾರೆ. ಕಚೇರಿಗಳನ್ನು ತಮ್ಮ ವಶಕ್ಕೆ ಪಡೆದುಕೊಂಡಿದ್ದಾರೆ. ನಿನ್ನೆ (ಸೋಮವಾರ) ರಾತ್ರಿ ಪಕ್ಷದ ಮುಖ್ಯ ಕಚೇರಿಯನ್ನು ಆಕ್ರಮಿಸಲು ಪ್ರಯತ್ನ ನಡೆದಿದೆ. ಅಭಿಷೇಕ್ ಬ್ಯಾನರ್ಜಿ ಅವರ ಕಚೇರಿಯ ಮೇಲೂ ದಾಳಿ



ನಡೆಸಲಾಗಿದೆ ಎಂದು ಆರೋಪಿಸಿದರು.

ಟಿಎಂಸಿ ಕಾರ್ಯಕರ್ತರನ್ನು ಬಿಜೆಪಿಗೆ ಸೇರಲು ಆಮಿಷವೊಡ್ಡಲಾಗುತ್ತಿದೆ. ಅವರು ತಮ್ಮ ಸುರಕ್ಷತೆಗಾಗಿ ಹಾಗೆ ಮಾಡಬಹುದು. ಇಂದು ಅವರು ಪಕ್ಷದಿಂದ ಹೋಗಬಹುದು. ಆದರೆ ಭವಿಷ್ಯದಲ್ಲಿ ಅವರು ತಮ್ಮ ಮನಸ್ಸನ್ನು ಬದಲಾಯಿಸಿಕೊಳ್ಳಲಿದ್ದಾರೆ ಎಂದು ಮಮತಾ ಹೇಳಿದರು.

ನೂತನ ಸರ್ಕಾರ ರಚನೆಗೆ ಬಿಜೆಪಿ ಸಜ್ಜು: ಐತಿಹಾಸಿಕ ಜಯ ಸಾಧಿಸಿರುವ ಬಿಜೆಪಿ ರಾಜ್ಯದಲ್ಲಿ ನೂತನ ಸರ್ಕಾರ ರಚನೆಗೆ ದಿನಾಂಕ ನಿಗದಿ ಮಾಡಿ ಘೋಷಿಸಿದೆ. ಮೇ 9 ರಂದು ರವೀಂದ್ರನಾಥ್ ಟ್ಯಾಗೋರ್ ಅವರ ಜನ್ಮವಾಗಿದ್ದು ಅಂದೇ ಸರ್ಕಾರ ರಚನೆಯಾಗಲಿದೆ ಎಂದು ಬಂಗಾಳ ಬಿಜೆಪಿ ರಾಜ್ಯಾಧ್ಯಕ್ಷ ಸಮಿಕ್ ಭಟ್ಟಾಚಾರ್ಯ ಅವರು ಇಂದು ಮಾಧ್ಯಮಗಳಿಗೆ ತಿಳಿಸಿದ್ದಾರೆ.



ಹಂಪನಗೌಡ ಬಾದರ್ಲಿಗೆ ಸಚಿವ ಸ್ಥಾನ ನೀಡಲು ಒತ್ತಾಯ

ರಾಯಚೂರು,ಮೇ.05

ರಾಜ್ಯದಲ್ಲಿ ಶೀಘ್ರದಲ್ಲೇ ನಡೆಯಲಿರುವ ಸಚಿವ ಸಂಪುಟ ವಿಸ್ತರಣೆಯಲ್ಲಿ ಸಿಂಧನೂರು ಕ್ಷೇತ್ರದ ಹಿರಿಯ ಶಾಸಕ ಹಂಪನಗೌಡ ಬಾದರ್ಲಿ ಅವರಿಗೆ ಸಚಿವ ಸ್ಥಾನ ನೀಡಬೇಕು ಎಂದು ಜಿಲ್ಲಾ ವೀರಶೈವ ಲಿಂಗಾಯತ ಸಮಾಜದ ಉಪಾಧ್ಯಕ್ಷ ಅಶೋಕ್ ಪಾಟೀಲ್ ಅತ್ತನೂರ್ ಒತ್ತಾಯಿಸಿದರು.

ನಗರದ ಪತ್ರಿಕಾ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಯಚೂರು ಜಿಲ್ಲೆಯ ಅನುಭವಸಂಪನ್ನ ಹಾಗೂ ಜನಪ್ರಿಯ ನಾಯಕರಾದ ಬಾದರ್ಲಿ ಅವರಿಗೆ ಸಚಿವ ಸ್ಥಾನ ನೀಡುವುದು ಜಿಲ್ಲೆಯ ಸಮಗ್ರ ಅಭಿವೃದ್ಧಿಗೆ ಸಹಕಾರಿಯಾಗುತ್ತದೆ ಎಂದು ಹೇಳಿದರು. ಈ ಬಗ್ಗೆ ರಾಜ್ಯ ಸರ್ಕಾರ ಹಾಗೂ ಕಾಂಗ್ರೆಸ್ ಹೈಕಮಾಂಡ್ ತಕ್ಷಣ ಗಮನ ಹರಿಸಬೇಕೆಂದು ಮನವಿ ಮಾಡಿದರು.

ಹಂಪನಗೌಡ ಬಾದರ್ಲಿ ಅವರು ದೀರ್ಘಕಾಲದಿಂದ ಸಾರ್ವಜನಿಕ ಜೀವನದಲ್ಲಿ ತೊಡಗಿಸಿಕೊಂಡಿದ್ದು, ಜಿಲ್ಲೆಯ ಅಭಿವೃದ್ಧಿಗೆ ಪ್ರಮುಖ ಕೊಡುಗೆ ನೀಡಿದ್ದಾರೆ. 1978ರಲ್ಲಿ ಯೂತ್ ಕಾಂಗ್ರೆಸ್ ಬ್ಲಾಕ್ ಅಧ್ಯಕ್ಷರಾಗಿ ರಾಜಕೀಯ ಜೀವನ ಆರಂಭಿಸಿದ ಅವರು, ಸಿಂಧನೂರು ಕ್ಷೇತ್ರದಿಂದ ಐದು ಬಾರಿ ಶಾಸಕರಾಗಿ ಆಯ್ಕೆಯಾಗಿದ್ದಾರೆ.

ಇದಲ್ಲದೆ, ಜಿಲ್ಲಾ ಪಂಚಾಯತ್ ಸದಸ್ಯರಾಗಿ ಹಾಗೂ 2016ರಲ್ಲಿ ಎಂಎಸ್ಐಎಲ್ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿ ಆಡಳಿತಾತ್ಮಕ ಅನುಭವ ಪಡೆದಿದ್ದಾರೆ. ಸಿಂಧನೂರು ಪ್ರದೇಶದಲ್ಲಿ ಕುಡಿಯುವ ನೀರಿನ ಟ್ಯಾಂಕ್ ನಿರ್ಮಾಣ ಸೇರಿದಂತೆ ಹಲವು ಮೂಲಸೌಕರ್ಯ ಅಭಿವೃದ್ಧಿ ಕಾಮಗಾರಿಗಳನ್ನು ಯಶಸ್ವಿಯಾಗಿ ಜಾರಿಗೊಳಿಸಿದ್ದಾರೆ.

ಶಿಕ್ಷಣ ಕ್ಷೇತ್ರದಲ್ಲಿಯೂ ಗಮನಾರ್ಹ ಸೇವೆ ಸಲ್ಲಿಸಿರುವ ಅವರು, ಲಿಂಗಸುಗೂರು ಮತ್ತು ಸಿಂಧನೂರು ಭಾಗಗಳಲ್ಲಿ ಶಿಕ್ಷಣ ಸಂಸ್ಥೆಗಳನ್ನು ನಡೆಸುತ್ತಿರುವ ಶ್ರೀ ವಲ್ಲಭಲ್ಲಾರಿ ಚನ್ನಬಸವೇಶ್ವರ ಎಜುಕೇಶನ್ ಸೊಸೈಟಿಯ ಅಧ್ಯಕ್ಷರಾಗಿದ್ದಾರೆ.

ಜಪಾನ್ ಸೇರಿದಂತೆ ವಿದೇಶಗಳಿಗೆ ಭೇಟಿ ನೀಡಿ ಆಡಳಿತ ಹಾಗೂ ಅಭಿವೃದ್ಧಿ ಕ್ಷೇತ್ರದಲ್ಲಿ ಅನುಭವ ಗಳಿಸಿರುವ ಬಾದರ್ಲಿ ಅವರಿಗೆ ಸಚಿವ ಸ್ಥಾನ ನೀಡುವ ಮೂಲಕ ರಾಜ್ಯ ಮಟ್ಟದಲ್ಲಿ ಅವರ ಸೇವೆಯನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದು ಅವರು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಆನಂದ್ ಪಾಟೀಲ್, ಚನ್ನಬಸವ, ಶರಣರೆಡ್ಡಿ, ಶಿವಾನಂದ್ ಚುಕ್ಕಿ, ಟಿ. ಬಸವರಾಜ್, ವಿರುಪಣ್ಣಗೌಡ ಬಂಡಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಬೇಸಿಗೆಯಲ್ಲಿ ನೀರಿನ ಸಮಸ್ಯೆ ಆಗದಂತೆ ಕ್ರಮ ಕೈಗೊಳ್ಳಿ - ಪ್ರಕಾಶ ಚೌಹ್ವಾಣ



ಸಿರವಾರ.ಮೇ.5-

ತಾಲೂಕಿನಲ್ಲಿ ಬೇಸಿಗೆ ವೇಳೆ ರೈತರು, ಜನಸಾಮಾನ್ಯರು ಹಾಗೂ ಜಾನುವಾರುಗಳಿಗೆ ಕುಡಿಯುವ ನೀರಿನ ಸಮಸ್ಯೆ ಎದುರಾಗದಂತೆ ಅಧಿಕಾರಿಗಳು ಮುಂಜಾಗ್ರತಾ ಕ್ರಮ ಕೈಗೊಳ್ಳಬೇಕು ಎಂದು ಪ್ರಕಾಶ ಚೌಹ್ವಾಣ ಜಂಟಿ ಕೃಷಿ ನಿರ್ದೇಶಕರು ಕೃಷಿ ಇಲಾಖೆ ಹೇಳಿದರು.

ಪಟ್ಟಣದ ತಹಸೀಲ್ದಾರ ಕಛೇರಿಯಲ್ಲಿ ಕುಡಿಯುವ ನೀರು ನಿರ್ವಹಣೆ ಬಗ್ಗೆ ಕರೆದಿದ್ದ ಸಭೆಯಲ್ಲಿ ಮಾತನಾಡಿದ ಅವರು ಎಲ್ಲಿ ಕೆರೆಗಳಿಂದ ನೀರು ಸರಬರಾಜು ಮಾಡುತ್ತಿದ್ದರೆ, ಕೆರೆಗಳು ಭರ್ತಿ ಮಾಡಿರಬೇಕು. ಕೆರೆಯ ನೀರು ಕಲುಶಿತವಾಗದಂತೆ ನೋಡಿಕೊಳಬೇಕು. ನೀರು ಪರೀಕ್ಷೆ ಮಾಡಿಕೊಳಿ. 6 ತಿಂಗಳಿಂದ ಮಳೆಯಾಗದ ಹಿನ್ನೆಲೆಯಲ್ಲಿ ಅಂತರ್ಜಲ ಕುಸಿಯುತ್ತಿದೆ. ಖಾಸಗಿ ಕೊಳವೆ ಭಾವಿಗಳನ್ನು ಮೂರು ತಿಂಗಳ ಮಟ್ಟಿಗೆ ಬಾಡಿಗೆ ಪಡೆದು ಸೂಕ್ತ ಗೌರವ ಧನ ನೀಡಬೇಕು ಎಂದರು. ತಹಸೀಲ್ದಾರ ಅಶೋಕಪವಾರ ಮಾತನಾಡಿ ಕಳೆದ ತಿಂಗಳು ಗಣೇಕಲ್ ಜಲಾಶಯ ಭರ್ತಿ

3 ನೇ ಪುಟಕ್ಕೆ

ರಾಯಚೂರಿನಲ್ಲಿ ಬಿಜೆಪಿ ಸಂಭ್ರಮ ವಿಜಯೋತ್ಸವ



ಕಲ್ಯಾಣ ಸಂಜೆ ಸುದ್ದಿ

ರಾಯಚೂರು, ಮೇ 5-

ಪಶ್ಚಿಮ ಬಂಗಾಳ ಮತ್ತು ಆಸ್ಸಾಂ ರಾಜ್ಯಗಳ ಚುನಾವಣೆಯಲ್ಲಿ ಭಾರತೀಯ ಜನತಾ ಪಕ್ಷವು ಸಾಧಿಸಿದ ಜಯದ ಹಿನ್ನೆಲೆಯಲ್ಲಿ ರಾಯಚೂರು ನಗರದಲ್ಲಿ ಬಿಜೆಪಿ ವತಿಯಿಂದ ವಿಜಯೋತ್ಸವವನ್ನು ಆಚರಿಸಲಾಯಿತು.

ನಗರದ ಡಾ. ಬಿ. ಆರ್. ಅಂಬೇಡ್ಕರ್ ವೃತ್ತದಲ್ಲಿ ನಡೆದ ಈ ಸಂಭ್ರಮಾಚರಣೆಯಲ್ಲಿ ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರು ಸೇರಿ ಸಿಹಿ ಹಂಚಿಕೊಂಡು ತಮ್ಮ ಸಂತೋಷವನ್ನು ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ಮಾಜಿ ವಿಧಾನ ಪರಿಷತ್ ಸದಸ್ಯ ಎನ್. ಶಂಕ್ರಪ್ಪ, ಹಿರಿಯ ಮುಖಂಡ ರಾಜಕುಮಾರ, ಜಿಲ್ಲಾ ಉಪಾಧ್ಯಕ್ಷರಾದ ಗೋವಿಂದ ಮತ್ತು ಶಂಕರ್ ರೆಡ್ಡಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ರವೀಂದ್ರ ಜಾಲ್ದಾರ್, ನಗರ ಅಧ್ಯಕ್ಷ ಊಟಕೂರು ರಾಘವೇಂದ್ರ ಸೇರಿದಂತೆ ಹಲವಾರು ಪ್ರಮುಖರು ಭಾಗವಹಿಸಿದ್ದರು.

ಇದೇ ಸಂದರ್ಭದಲ್ಲಿ ಪ್ರದೀಪ್ ಸನಬಾಳ್, ಸುಲೋಚನಾ ಬಸವರಾಜ್, ರಾಮು ಕಡಗೋಲ್, ಚಂದ್ರಶೇಖರ, ಶಿವಕುಮಾರ್ ನರಸಿಂಹ ರೆಡ್ಡಿ, ಅಶ್ವಿನಿ ಸೇರಿದಂತೆ ಅನೇಕ ಕಾರ್ಯಕರ್ತರು ಉಪಸ್ಥಿತರಿದ್ದರು.

ಸಿ.ಹೆಚ್. ಕಲಬೆರಿಕೆ ಹೆಂಡ ಮಾರಾಟ: ರಾಯಚೂರು ವಿಭಾಗೀಯ ದಂಡಾಧಿಕಾರಿಗಳಿಂದ ಇಬ್ಬರು ಆರೋಪಿಗಳ ಗಡಿಪಾರುಗೆ ಆದೇಶ



ರಾಯಚೂರು ಮೇ.05-

ರಾಯಚೂರು ಉಪ ವಿಭಾಗದ ವ್ಯಾಪ್ತಿಯಲ್ಲಿ ಸಿ.ಹೆಚ್. ಕಲಬೆರಿಕೆ ಹೆಂಡ ಮಾರಾಟದಲ್ಲಿ ಭಾಗಿಯಾಗ ರೂಡಿಗತ ಆರೋಪಿಗಳಾದ ವಾಹೀದ್ ಚುಮಟಿ ತಂದೆ ಬರ್ಷಿದ್ (56) ಹಾಗೂ ಹುಸೇನಿ ರವಿ ತಂದೆ ಮಾರೆಪ್ಪ (32) ಇವರನ್ನು ಕರ್ನಾಟಕ ಪೊಲೀಸ್ ಕಾಯ್ದೆ 1963 ಕಲಂ 55(ಎ) (ಬಿ) ಅಡಿಯಲ್ಲಿ ರಾಯಚೂರು ಉಪ ವಿಭಾಗೀಯ ದಂಡಾಧಿಕಾರಿಗಳಾದ ಡಾ.ಹಂಪಣ್ಣ ಸಜ್ಜನ್ ಅವರು ಮೇ.04ರಂದು ಗಡಿಪಾರು ಮಾಡಿ ಆದೇಶ ಹೊರಡಿಸಿದ್ದಾರೆ.

ವಾಹೀದ್ ಚುಮಟಿ ತಂದೆ ಬರ್ಷಿದ್ (56) ಆರೋಪಿಯನ್ನು ಬೀದರ್ ಜಿಲ್ಲೆಯ ಔರಾದ (ಬಿ) ತಾಲೂಕಿನ ಸಂತಪೂರು ಪೋಲಿಸ್ ಠಾಣೆಯ ವ್ಯಾಪ್ತಿಗೆ ಹಾಗೂ ಹುಸೇನಿ ರವಿ ತಂದೆ ಮಾರೆಪ್ಪ

(32) ಬೀದರ್ ಜಿಲ್ಲೆಯ ಔರಾದ (ಬಿ) ತಾಲೂಕಿನ ಚಿಂತಕಿ ಪೋಲಿಸ್ ಠಾಣೆಯ ವ್ಯಾಪ್ತಿಗೆ ದಿನಾಂಕ: 05-05-2026 ರಿಂದ 05-08-2026ರವರೆಗೆ (ಮೂರು ತಿಂಗಳು) ಬೀದರ್ ಜಿಲ್ಲೆಗೆ ಗಡಿಪಾರು ಮಾಡಿಲಾಗಿದ್ದು,

3 ನೇ ಪುಟಕ್ಕೆ

ಕುಡಿಯುವ ನೀರಿನ ಕೊರತೆ ಇರುವ ಗ್ರಾಮಗಳಿಗೆ ಕಡ್ಡಾಯವಾಗಿ ಭೇಟಿ ನೀಡಿ: ಜಿಲ್ಲಾಧಿಕಾರಿ ನಿತೀಶ್ ಕೆ.

ರಾಯಚೂರು ಮೇ.05-

ಬೇಸಿಗೆ ದಿನಗಳಲ್ಲಿ ಕುಡಿಯುವ ನೀರಿನ ಕೊರತೆಯಾಗದಂತೆ ಪರಿಸ್ಥಿತಿಯನ್ನು ಅವಲೋಕಿಸಲು ಜಿಲ್ಲೆಯ ಪ್ರತಿ ತಾಲೂಕಿಗೆ ಒಬ್ಬ ಜಿಲ್ಲಾ ಮಟ್ಟದ ಹಿರಿಯ ಅಧಿಕಾರಿಯನ್ನು ನೋಡಲ್ ಅಧಿಕಾರಿಯನ್ನಾಗಿ ನೇಮಕ ಮಾಡಲಾಗಿದ್ದು, ಕುಡಿಯುವ ನೀರಿನ ಸಮಸ್ಯೆಯನ್ನು ಎದುರಿಸು ತ್ತಿರುವ ಗ್ರಾಮಗಳ ಹಾಗೂ ಮುಂಬರುವ ದಿನಗಳಲ್ಲಿ ಸಮಸ್ಯೆ ಎದುರಿಸಬಹುದಾದ ಗ್ರಾಮಗಳ ವಿವರಗಳನ್ನು ಸಂಬಂಧಪಟ್ಟ ತಾಲೂಕು ಪಂಚಾಯತ್ ಕಾರ್ಯ ನಿರ್ವಾಹಕ



ಅಧಿಕಾರಿಗಳಿಂದ ಮಾಹಿತಿ ಪಡೆದುಕೊಂಡು, ಸದರಿ ತಮ್ಮ ತಮ್ಮ ತಾಲೂಕುಗಳ ಎಲ್ಲಾ ಸಮಸ್ಯಾತ್ಮಕ ಗ್ರಾಮಗಳಿಗೆ ಕಡ್ಡಾಯವಾಗಿ ಭೇಟಿ ನೀಡಬೇಕೆಂದು ಜಿಲ್ಲಾಧಿಕಾರಿಗಳಾದ ನಿತೀಶ್ ಕೆ.ಅವರು ಸೂಚಿಸಿದ್ದಾರೆ.

ನೋಡಲ್ ಅಧಿಕಾರಿಗಳು ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಸಭೆಗಳನ್ನು ನಡೆಸಿ, ಕುಡಿಯುವ ನೀರಿನ ಸಮಸ್ಯೆ ಬಗೆಹರಿಸಲು ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ಹಾಗೂ ನೋಡಲ್ ಅಧಿಕಾರಿಗಳು ಭೇಟಿ ನೀಡಿದ ಸಮಯದಲ್ಲಿ ಜಿ.ಪಿ.ಎಸ್ ಭಾವಚಿತ್ರದೊಂದಿಗೆ ತೆಗೆದುಕೊಂಡ ಫೋಟೋಗಳೊಂದಿಗೆ ತಾವು ತೆಗೆದುಕೊಂಡ ಕ್ರಮಗಳ ಕುರಿತು ವರದಿಯನ್ನು ಜಿಲ್ಲಾಧಿಕಾರಿಗಳ ಕಾರ್ಯಾಲಯಕ್ಕೆ ಸಲ್ಲಿಸುವಂತೆ ಜಿಲ್ಲಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.


ಬೇಸಿಗೆಯಲ್ಲಿ ಆರೋಗ್ಯದ ರಕ್ಷಣೆಗೆ ಹೆಚ್ಚಿನ ಆದ್ಯತೆ ನೀಡಿ: ಡಾ.ಸುರೇಂದ್ರ ಬಾಬು

ರಾಯಚೂರು ಮೇ.05-

ಜಿಲ್ಲೆಯಾದ್ಯಂತ ಪ್ರಸ್ತುತ ದಿನಗಳಲ್ಲಿ ಬಿಸಿಲಿನ ಪ್ರಕರತೆ ಮತ್ತು ತೀವ್ರತೆ ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಸಾರ್ವಜನಿಕರು, ಗರ್ಭಿಣಿಯರು, ಬಾಣಂತಿಯರು, ಮಕ್ಕಳು ಹಾಗೂ ವಯೋವೃದ್ದರು ಆರೋಗ್ಯದ ಬಗ್ಗೆ ಮುನ್ನೆಚ್ಚರಿಕೆ ಕ್ರಮಗಳನ್ನು ಪಾಲಿಸುವ ಮೂಲಕ ಆರೋಗ್ಯದ ರಕ್ಷಣೆಗೆ ಹೆಚ್ಚಿನ ಆಧ್ಯತೆ ನೀಡಬೇಕೆಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಸುರೇಂದ್ರ ಬಾಬು ಅವರು ಹೇಳಿದರು.

ಮೇ.04ರ ಸೋಮವಾರ ದಂದು ಜಿಲ್ಲೆಯ ದೇವದುರ್ಗ ಪಟ್ಟಣದ ತಾಲೂಕಾ ಸಾರ್ವಜನಿಕ ಆಸ್ಪತ್ರೆಯಲ್ಲಿ ಬೇಸಿಗೆ ಶಾಖಾಘಾತ ನಿರ್ವಹಣೆಯ ವಾರ್ಡ್, ಹಾಗೂ ಇತರೆ ವಾರ್ಡ್‌ಗೆ ಭೇಟಿ ನೀಡಿ ಅವರು ಮಾತನಾಡಿದರು.

ಜಿಲ್ಲೆಯಲ್ಲಿ ಪ್ರತಿದಿನ ಮಧ್ಯಾಹ್ನದಲ್ಲಿ ಬಿಸಿಲು 40 ಡಿಗ್ರಿ ಮೇಲ್ಪಟ್ಟು ಹಾಗೂ



ಪ್ರಖರವಾಗಿರುವ ಹಿನ್ನೆಲೆಯಲ್ಲಿ ಮನೆಯಿಂದ ಹೊರಗೆ ಹೋಗುವಾಗ ಆದಷ್ಟು ಹತ್ತಿ ಬಟ್ಟೆ ಉಡುಗೆ ಜೊತೆಯಲ್ಲಿ ಕುಡಿಯುವ ನೀರು, ಛತ್ರಿ ಬಳಸಲು ಆಧ್ಯತೆ ನೀಡಿ, ಆದಷ್ಟು ದ್ರವ ಆಹಾರ ಸೇವೆ ಮತ್ತು ಮನೆಯಲ್ಲಿ ಚಿಕ್ಕ ಮಕ್ಕಳು, ಗರ್ಭಿಣಿ, ಬಾಣಂತಿಯರು, ದೀರ್ಘ ಕಾಲಿನ ಚಿಕಿತ್ಸೆ ಗೆ ಒಳಪಟ್ಟವರು, ವಯೊವೃದ್ದರ ಕಾಳಜಿಗಾಗಿ ಕುಟುಂಬದ ಸದಸ್ಯರು ಹೆಚ್ಚಿನ ಆದ್ಯತೆ ನೀಡಬೇಕು.

ಪ್ರತಿಯೊಬ್ಬರೂ ಮನೆಯಲ್ಲಿ ಓಆರ್ ಎಸ್ ಜೀವಜಲ ಬಳಕೆಗೆ ಆಧ್ಯತೆ ನೀಡುವ ಮೂಲಕ ನಿರ್ಜಲಿಕರಿಣದಿಂದ ದೇಹದ ನೀರಿನ ಅಂಶದ ಜೊತೆಗೆ ಲವಣಾಂಶ ಕಡಿಮೆಯಾಗದಂತೆ ಓಆರ್‌ಎಸ್ ಜೀವ ಜಲ ಪ್ಯಾಕೆಟ್ ಸದಾ ಮನೆಯಲ್ಲಿರಲಿ ಅಲ್ಲದೆ ಒಂದು ಲೀಟರ್ ನೀರಿಗೆ ಪ್ಯಾಕೇಟ್‌ನಲ್ಲಿಯ ಸಂಪೂರ್ಣ ಪುಡಿ ಹಾಕಿ ದ್ರಾವಣ ಸಿದ್ದಪಡಿಸಿ 24 ಗಂಟೆಯೊಳಗೆ ಬಳಸಬೇಕು. ಇದಲ್ಲದೆ ಲಿಂಬೂ ಪಾನಕ, ಎಳೆನೀರು, ಮಜ್ಜಿಗೆ, ಗಂಜಿ, ಆಹಾರದಲ್ಲಿ ಬೇಳೆ ತಿಳಿ ಬಳಸಬೇಕು.

ಪ್ರಖರ ಬಿಸಿಲಿನ ಅವಧಿಯಲ್ಲಿ ಆದಷ್ಟು ಮನೆಯ ಹೊರಗೆ ಹೋಗದಂತೆ ಮುತವರ್ಜಿ ವಹಿಸಿಬೇಕು. ಮನೆಯ ಒಳಗೆ ಅಥವಾ ನೆರಳು ಇರುವ ಸ್ಥಳದಲ್ಲಿ ವಿಶ್ರಾಂತಿ ಪಡೆಯಬೇಕಿದೆ. ಆದಷ್ಟು ಮಸಾಲೆಯುಕ್ತ ಪದಾರ್ಥಗಳ ಸೇವನೆ ಕಡಿಮೆ ಇರಬೇಕು. ಅಧಿಕ ಬಿಸಿಲಿರುವ ಸಮಯದಲ್ಲಿ ಮನೆಯ ಹೊರಗೆ ಹೊಗದಿರಲು ಯೋಚಿಸಿ, ದೈನಂದಿನವಾಗಿ ತೆಗೆದುಕೊಳ್ಳುವ ಮಾತ್ರೆಗಳನ್ನು ಜೊತೆಯಲ್ಲಿರಿಸಿಕೊಳ್ಳಿ, ದ್ರವ ಆಹಾರ ಹೆಚ್ಚು ಸೇವಿಸಬೇಕು.

ಆಟವಾಡುವ ಮಕ್ಕಳು ಬಿಸಿಲಿನಲ್ಲಿ ನಿಲ್ಲಿಸಿರುವ ವಾಹನ ಮುಟ್ಟದಂತೆ ಜಾಗೃತಿ

3 ನೇ ಪುಟಕ್ಕೆ

ಗಣತಿದಾರರು ಬಿಸಿಗಾಳಿಯ ಕುರಿತು ಮುನ್ನೆಚ್ಚರಿಕೆ ಕ್ರಮಗಳನ್ನು ಅನುಸರಿಸಲು ರಾಜ್ಯ ಜನಗಣತಿ ನೋಡಲ್ ಅಧಿಕಾರಿ ಮನೋಜ್ ಕುಮಾರ್ ಮೀನಾ ಸಲಹೆ

ರಾಯಚೂರು ಮೇ.05 -

ಭಾರತೀಯ ಹವಾಮಾನ ಇಲಾಖೆ ಬಿಡುಗಡೆ ಮಾಡಿದ 2026ರ ಬೇಸಿಗೆ ಕಾಲದ (ಏಪ್ರಿಲ್-ಜೂನ್ 2026) ಪರಿಷ್ಕೃತ ಋತು ಮುನ್ನೋಟದ ಪ್ರಕಾರ 2026ರ ಏಪ್ರಿಲ್-ಮೇ ತಿಂಗಳಲ್ಲಿ ಕರ್ನಾಟಕದ ಉತ್ತರ ಒಳನಾಡಿನ ಬಹುಭಾಗ 'ಗಳಲ್ಲಿ ಮತ್ತು ರಾಜ್ಯದ ಇತರ ಒಳನಾಡು ಪ್ರದೇಶಗಳಲ್ಲಿ ಸಾಮಾನ್ಯಕ್ಕಿಂತ ಹೆಚ್ಚು ತಾಪಮಾನ ವ'ುುುಂದ'ುವ'ರಿಯುುವ' ಸಾಧ್ಯತೆಯಿದ್ದು, ಜನಗಣತಿ ಕಾರ್ಯಗಳಲ್ಲಿ ತೊಡಗಿರುವ ಗಣತಿದಾರರು ಬಿಸಿಗಾಳಿಯ ಕುರಿತು ಮುನ್ನೆಚ್ಚರಿಕೆ ಕ್ರಮಗಳನ್ನು ಅನುಸರಿಸಬೇಕೆಂದು ಪರಿಹಾರ ಆಯುಕ್ತರು ಮತ್ತು ಕಂದಾಯ ಇಲಾಖೆಯ ಸರ್ಕಾರದ ಕಾರ್ಯದರ್ಶಿ ಹಾಗೂ ರಾಜ್ಯ ಜನಗಣತಿ ನೋಡಲ್ ಅಧಿಕಾರಿಗಳಾದ ಮನೋಜ್ ಕುಮಾರ್ ಮೀನಾ ಅವರು ಸಲಹೆ ನೀಡಿದ್ದಾರೆ.

ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯವು 23ನೇ ಏಪ್ರಿಲ್ 2026ರ ಪತ್ರದ ಮೂಲಕ ಎಲ್ಲಾ ರಾಜ್ಯಗಳಿಗೆ ಬಿಸಿಗಾಳಿಯ ದುಷ್ಪರಿಣಾಮಗಳನ್ನು ಕಡಿಮೆಗೊಳಿಸಲು ಸೂಕ್ತ ಸಿದ್ಧತೆ ಮತ್ತು ಜಾಗೃತಿ ಕ್ರಮಗಳನ್ನು ಕೈಗೊಳ್ಳುವಂತೆ ಸಲಹೆ ನೀಡಿದೆ. ಇದರೊಂದಿಗೆ ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರವು 28ನೇ ಏಪ್ರಿಲ್ 2026ರ ತನ್ನ ಪತ್ರದ ಮೂಲಕ ಬಿಸಿಗಾಳಿ ಸಿದ್ಧತೆ ಮತ್ತು ಪ್ರತಿಕ್ರಿಯೆಯನ್ನು ಬಲಪಡಿಸಲು ಮಾರ್ಗಸೂಚಿಗಳನ್ನು ಹೊರಡಿಸಿದೆ.

ಪ್ರಸ್ತುತ ಜನಗಣತಿಯ ಮೊದಲ ಹಂತವಾಗಿ ಮನೆಪಟ್ಟಿ ಮತ್ತು ಮನೆ ಗಣತಿಯನ್ನು ರಾಜ್ಯದಾದ್ಯಂತ ಕ್ಷೇತ್ರ ಗಣಕರ ಮೂಲಕ ನಡೆಯುತ್ತಿದೆ. ಈ ಕಾರ್ಯಗಳು ಬೇಸಿಗೆಯ ತೀವ್ರ ಬಿಸಿಗಾಳಿ ಅವಧಿಯಲ್ಲಿ ನಡೆಯುತಿದ್ದು, ದೀರ್ಘಕಾಲ ಹೊರಾಂಗಣದಲ್ಲಿ ಕೆಲಸ ಮಾಡುವುದರಿಂದ ಮತ್ತು ಶಾರೀರಿಕ ಶ್ರಮದಿಂದ ಉಷ್ಣ ಸಂಬಂಧಿತ ಅನಾರೋಗ್ಯದ ಅಪಾಯ ಹೆಚ್ಚಾಗಿದೆ. ಈ ಹಿನ್ನೆಲೆಯಲ್ಲಿ ಗಣತಿದಾರರ ಆರೋಗ್ಯ ಕಾಪಾಡಿಕೊಳ್ಳುತ್ತಾ ಜನಗಣತಿ

3 ನೇ ಪುಟಕ್ಕೆ

ಕನಕಗಿರಿ ಉತ್ಸವದ ಎಲ್ಲ ಸಮಿತಿಗಳು ಚುರುಕಾಗಿ ಕಾರ್ಯನಿರ್ವಹಿಸಲಿ



ಕೊಪ್ಪಳ ಮೇ 05-

ಕೊಪ್ಪಳ ಜಿಲ್ಲೆಯ ಐತಿಹಾಸಿಕ ಪುಣ್ಯ ಕ್ಷೇತ್ರವಾದ ಕನಕಗಿರಿಯಲ್ಲಿ ಮೇ 16 ರಿಂದ ಎರಡು ದಿನಗಳ ಕಾಲ ನಿಗದಿಯಾದ ಕನಕಗಿರಿ ಉತ್ಸವ-2026ರ ವಿವಿಧ ಸಮಿತಿಗಳಲ್ಲಿನ ಎಲ್ಲ ಅಧಿಕಾರಿಗಳು ಮತ್ತು ಸಿಬ್ಬಂದಿ ಚುರುಕಾಗಿ ಕಾರ್ಯ ನಿರ್ವಹಿಸಬೇಕು ಎಂದು ಜಿಲ್ಲಾಧಿಕಾರಿಗಳಾದ ಡಾ. ಸುರೇಶ ಬಿ. ಇಟ್ನಾಳ ಅವರು ಕಟ್ಟುನಿಟ್ಟಿನ ನಿರ್ದೇಶನ ನೀಡಿದರು.

ಕನಕಗಿರಿ ಉತ್ಸವ-2026ರ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಮೇ 4 ರಂದು ಹಮ್ಮಿಕೊಂಡಿದ್ದ ಮತ್ತೊಂದು ಸುತ್ತಿನ ಪೂರ್ವಭಾವಿ ಸಿದ್ಧತಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ಈ ಮೊದಲು ನಡೆದ ಸಭೆಯಲ್ಲಿ ಸೇರಿದ್ದ 16ಕ್ಕು ಹೆಚ್ಚಿನ ಸಮಿತಿಗಳಲ್ಲಿನ ಅಧಿಕಾರಿಗಳಿಗೆ ಈಗಾಗಲೇ ಬೇರೆ ಬೇರೆ ರೀತಿಯ ಕಾರ್ಯ ಹಂಚಿಕೆ ಮಾಡಿದಂತೆ ಕಾರ್ಯಪ್ರವೃತ್ತರಾಗಲು ಸೂಚಿಸಲಾಗಿತ್ತು. ಪ್ರಸ್ತುತ ಉತ್ಸವಕ್ಕೆ ಬೆರಳೆಣಿಯಷ್ಟು ದಿನಗಳು ಮಾತ್ರ ಬಾಕಿಯಿದೆ. ಎಲ್ಲಾ ಸಮಿತಿಗಳು ತಮ್ಮ ಕಾರ್ಯ ನಿರ್ವಹಣೆಯನ್ನು ಕಾಲಮಿತಿಯೊಳಗೆ ಪೂರ್ಣಗೊಳಿಸಲು ವಿಶೇಷ ಒತ್ತು ಕೊಡಬೇಕು. ಮೇಲಿಂದ ಮೇಲೆ ಸಭೆ ನಡೆಸಿ ಸಿದ್ಧತೆ ಮಾಡಿಕೊಳ್ಳಬೇಕು ಎಂದು ಜಿಲ್ಲಾಧಿಕಾರಿಗಳು ಸೂಚನೆ ನೀಡಿದರು.

ಉತ್ಸವ ಸಂದರ್ಭದಲ್ಲಿ ಕನಕಗಿರಿಯಲ್ಲಿ ಹಬ್ಬದ ವಾತಾವರಣ ನಿರ್ಮಾಣವಾಗಬೇಕು. ಮೆರವಣಿಗೆ ಮಾರ್ಗ ಸೇರಿದಂತೆ ಎಲ್ಲಾ ಕಡೆಗೆ ವಿದ್'ಯುದೀಪಾಲಂಕಾರ'ಕ್ಕೆ ವ್ಯವಸ್ಥೆಯಾಗಬೇಕು. ಉತ್ಸವದ ಅಂಗವಾಗಿ ನಡೆಯುವ ಮೆರವಣಿಗೆಯಲ್ಲಿ ಪಾಲ್ಗೊಳ್ಳುವ ಜಾನಪದ ಕಲಾ ತಂಡಗಳ ಆಯ್ಕೆ ಪ್ರಕ್ರಿಯೆ ಬೇಗನೆ ಪೂರ್ಣವಾಗಬೇಕು. ಉತ್ಸವದಲ್ಲಿ ಕಾರ್ಯಕ್ರಮ ನೀಡುವ ಕಲಾವಿದರ ಆಯ್ಕೆ ಪ್ರಕ್ರಿಯೆ ಕೂಡ ಪಾರದರ್ಶಕವಾಗಿ ನಡೆಯಬೇಕು ಎಂದು ಮೆರವಣಿಗೆ ಮತ್ತು ಸಾಂಸ್ಕೃತಿಕ ಸಮಿತಿಗೆ ಸೂಚನೆ ನೀಡಿದರು.

ಕಾರ್ಯಕ್ರಮಕ್ಕೆ ಆಗಮಿಸಲಿರುವ ಗಣ್ಯರು, ಕಲಾವಿದರು, ಪತ್ರಕರ್ತರು, ಅಧಿಕಾರಿಗಳು ಸೇರಿದಂತೆ ಎಲ್ಲ ಆಹ್ವಾನಿತರ ಮಾಹಿತಿ ಪಡೆದು ಅವರಿಗೆ ಕನಕಗಿರಿ ಸೇರಿದಂತೆ ಸುತ್ತಲಿನ ವಿವಿಧೆಡೆ ಸರಿಯಾದ ವಸತಿ ಮತ್ತು ಊಟದ ವ್ಯವಸ್ಥೆ ಕಲ್ಪಿಸಬೇಕು. ಸಾರ್ವಜನಿಕರಿಗೆ ಊಟ ಮತ್ತು ಉಪಹಾರ ಹಾಗೂ ಕುಡಿಯುವ ನೀರಿನ ವ್ಯವಸ್ಥೆಯನ್ನು ಅಚ್ಚುಕಟ್ಟಾಗಿ ಮಾಡಬೇಕು. ಆಹಾರ ಗುಣಮಟ್ಟದ ಬಗ್ಗೆ ಒತ್ತು ಕೊಡಬೇಕು ಎಂದು ಆಹಾರ ಸಮಿತಿಯ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಉತ್ಸವದಲ್ಲಿ ಕುಸ್ತಿ, ಕಬ್ಬಡ್ಡಿ ಹಾಗೂ ವಾಲಿಬಾಲ್ ಸೇರಿದಂತೆ ಬೇರೆ ಬೇರೆ ಕ್ರೀಡೆಗಳಿಗೆ ಅಗತ್ಯ ಸಿದ್ಧತೆ ಮಾಡಿಕೊಳ್ಳಬೇಕು. ಹೆಸರಾಂತ ಕುಸ್ತಿ ಹಾಗೂ ಕಬಡ್ಡಿ ಪಟುಗಳು ಸೇರುವುದನ್ನು ಖಚಿತಪಡಿಸಿಕೊಂಡು ಅವರ ಪಟ್ಟಿ ನೀಡಬೇಕು ಎಂದು ಜಿಲ್ಲಾಧಿಕಾರಿಗಳು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಅಧಿಕಾರಿ ಗಳಿಗೆ ಸೂಚನೆ ನೀಡಿದರು.

ವೇದಿಕೆ ಮತ್ತು ಪೆಂಡಾಲ ನಿರ್ಮಾಣ, ಗ್ರೀನ್ ರೂಮ್, ವೇದಿಕೆಗೆ ಹೂವಿನ ಕುಂಡಗಳ ವ್ಯವಸ್ಥೆ, ಬ್ಯಾರಿಕೇಡಿಂಗ್ ಮತ್ತು ಕಾರ್ಯಕ್ರಮಕ್ಕೆ ಬರುವ ವಾಹನಗಳಿಗೆ ಸೂಕ್ತ ಪಾರ್ಕಿಂಗ್ ವ್ಯವಸ್ಥೆಗೆ ಅಗತ್ಯ ಕ್ರಮ ವಹಿಸುವಂತೆ ವೇದಿಕೆ ಸಮಿತಿಗೆ ಸೂಚನೆ ನೀಡಲಾಯಿತು.

ಈ ಬಾರಿ ಉತ್ಸವದಲ್ಲಿ ಕೃಷಿ ಹಾಗೂ ತೋಟಗಾರಿಕಾ ಇಲಾಖೆಯಿಂದ ದೊಡ್ಡ ಮಟ್ಟದಲ್ಲಿ ಪ್ರದರ್ಶನ ಮಳಿಗೆಗಳು ನಿರ್ಮಾಣವಾಗಬೇಕು. ರೇಷ್ಮೆ, ಮೀನುಗಾರಿಕೆ, ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಆರೋಗ್ಯ ಇಲಾಖೆಯಿಂದಲು ಸಹ ಯೋಜನೆಗಳ ಮಾಹಿತಿ ಪ್ರದರ್ಶನ ಮಳಿಗೆಗಳನ್ನು ಅಚ್ಚುಕಟ್ಟಾಗಿ ನಿರ್ಮಿಸಬೇಕು. ಉತ್ಸವದಲ್ಲಿ ವಸ್ತು ಪ್ರದರ್ಶನ ಮತ್ತು ಮಾರಾಟ ಮಳಿಗೆಗಳನ್ನು ಹಾಕಲು ಸಂಜೀವಿನಿ ಮತ್ತು ಎನ್.ಆರ್.ಎಲ್. ಎಂ ಮಹಿಳಾ ಸ್ವಸಹಾಯ ಸಂಘದ ಸದಸ್ಯರಿಗೆ ಅವಕಾಶ ಕಲ್ಪಿಸಬೇಕು ಎಂದು ತಿಳಿಸಿದರು. ಉತ್ಸವದಲ್ಲಿ ಪಾಲ್ಗೊಳ್ಳುವ ಸಾರ್ವಜನಿಕರಿಗೆ ಅನುಕೂಲವಾಗುವಂತೆ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದಿಂದ ಹೆಚ್ಚಿನ ಬಸ್‌ಗಳ ವ್ಯವಸ್ಥೆ ಮಾಡಬೇಕು. ಮೇ 16 ಮತ್ತು 17 ರಂದು ಎರಡು ದಿನಗಳ ಕಾಲ ನಡೆಯುವ ಕನಕಗಿರಿ ಉತ್ಸವದಲ್ಲಿ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಬೇರೆ ಬೇರೆ ಸಮಿತಿಗಳು ಮತ್ತು ಪ್ರಚಾರ ಹಾಗೂ ಮಾಧ್ಯಮ ಸಮಿತಿ ಅಗತ್ಯ ಕ್ರಮ ವಹಿಸಬೇಕು ಎಂದು ಸೂಚನೆ ನೀಡಿ ದರು.

ಈ ವೇಳೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಡಾ.ರಾಮ್ ಎಲ್ ಅರಸಿದ್ದಿ ಮಾತನಾಡಿ, ಉತ್ಸವಕ್ಕೆ ಆಗಮಿಸುವ ಗಣ್ಯ ವ್ಯಕ್ತಿಗಳು ಹಾಗೂ ಕಲಾವಿದರು ಮತ್ತು ಸಾರ್ವಜನಿಕರಿಗೆ ಯಾವುದೇ ರೀತಿಯ ತೊಂದರೆ ಆಗದಂತೆ ಸೂಕ್ತ ಭದ್ರತಾ ವ್ಯವಸ್ಥೆಗೆ ಈಗಿನಿಂದಲೇ ಕ್ರಮ ವಹಿಸಬೇಕು ಎಂದು ಪೊಲೀಸ್ ಅಧಿಕಾರಿಗಳಿಗೆ ಸೂಚನೆ ನೀಡಿದರು. ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿಗೆ ಇನ್ನಿತರ ಸಮಿತಿಗಳಲ್ಲಿನ ಅಧಿಕಾರಿಗಳು ಸಹಕಾರ ನೀಡಬೇಕು ಎಂದು ತಿಳಿಸಿದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ವರ್ಣಿತ್ ನೇಗಿ ಅವರು ಮಾತನಾಡಿ, ಕನಕಗಿರಿ ಉತ್ಸವ ಹಿನ್ನೆಲೆಯಲ್ಲಿ ಕನಕಗಿರಿ, ಕಾರಟಗಿ ಮತ್ತು ಗಂಗಾವತಿ ತಾಲೂಕು ಪಂಚಾಯತ್ ಕಾರ್ಯ ನಿರ್ವಹಣಾಧಿಕಾರಿಗಳು ಪರಸ್ಪರ ಸಮನ್ವಯದಿಂದ, ಮುತುವರ್ಜಿ ವಹಿಸಿ ಕಾರ್ಯ ನಿರ್ವಹಿಸಬೇಕು. ಕನಕಗಿರಿ ಪಟ್ಟಣ ಸೇರಿದಂತೆ ಗ್ರಾಮೀಣ ಪ್ರದೇಶದಲ್ಲಿ ಸಹ ಹಬ್ಬದ ವಾತಾವರಣ ನಿರ್ಮಾಣವಾಗುವಂತೆ ಕನಕಗಿರಿ ತಾಲೂಕಿನ ಎಲ್ಲ ಗ್ರಾಮ ಪಂಚಾಯತಗಳ ಅಭಿವೃದ್ಧಿ ಅಧಿ ಕಾರಿಗಳಿಗೆ ನಿರ್ದೇಶನ ನೀಡಿ ಕಾರ್ಯಕ್ರಮಗಳನ್ನು ರೂಪಿಸಬೇಕು. ಕನಕಗಿರಿ ತಾಲೂಕಿನಲ್ಲಿನ ಐತಿಹಾಸಿಕ ಸ್ಥಳಗಳೆಲ್ಲವೂ ಅಲಂಕಾರವಾಗಬೇಕು. ಎಲ್ಲ ಪ್ರಮುಖ ರಸ್ತೆಗಳು ಸುಗಮ ಸಂಚಾರಕ್ಕೆ ಸಿದ್ದವಾಗಿರುವಂತೆ ನೋಡಿಕೊಳ್ಳಬೇಕು ಎಂದು ತಿಳಿಸಿದರು.

ಸಭೆಯಲ್ಲಿ ಅಪರ ಜಿಲ್ಲಾಧಿಕಾರಿಗಳಾದ ಸಿದ್ರಾಮೇಶ್ವರ, ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿಗಳಾದ ಟಿ.ಕೃಷ್ಣಮೂರ್ತಿ, ಮುಖ್ಯ ಯೋಜನಾಧಿಕಾರಿಗಳಾದ ಡಿ.ಮಂಜುನಾಥ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಶರಣೇಗೌಡ ಪಾಟೀಲ್, ಕನಕಗಿರಿ ತಾಲ್ಲೂಕು ಕಸಾಪ ಅಧ್ಯಕ್ಷರಾದ ಮಹೇಬೂಬ್, ಮುಖ್ಯ ಲೆಕ್ಕಾಧಿಕಾರಿಗಳಾದ ಅಮೀನ ಅತ್ತಾರ, ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾಧಿಕಾರಿಗಳಾದ ಮಂಜುನಾಥ ಗುಂಡೂರು, ಪದವಿಪೂರ್ವ ಶಿಕ್ಷಣ ಇಲಾಖೆ ಉಪ ನಿರ್ದೇಶಕರಾದ ಜಗದೀಶ, ಶಾಲಾ ಶಿಕ್ಷಣ ಮತ್ತು ಸಾಕ್ಷರತೆ ಇಲಾಖೆ ಉಪ ನಿರ್ದೇಶಕರಾದ ಸೋಮಶೇಖರ ಗೌಡ ಪಾಟೀಲ ಸೇರಿದಂತೆ ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿ ಕಾರಿಗಳು ಉಪಸ್ಥಿತರಿದ್ದರು.



ಪಶ್ಚಿಮ ಬಂಗಾಳ, ಅಸ್ಸಾಂನಲ್ಲಿ ಗೆಲುವು : ಬಿಜೆಪಿಯಿಂದ ವಿಜಯೋತ್ಸವ

ಕಲಬುರಗಿ,ಮೇ.05-

ಪಂಚ ರಾಜ್ಯಗಳ ಚುನಾವಣೆಯಲ್ಲಿ ಬಿಜೆಪಿ ಪಕ್ಷ ಹಲವು ಕ್ಷೇತ್ರಗಳಲ್ಲಿ ಗೆಲುವು ಸಾಧಿಸಿರುವ ಹಿನ್ನೆಲೆ ಕಲಬುರಗಿ ಜಿಲ್ಲಾ ಬಿಜೆಪಿ ಘಟಕದ ವತಿಯಿಂದ ನಗರದ ಸರ್ದಾರ್ ವಲ್ಲಭ ಭಾಯಿ ಪಟೇಲ್ ವೃತ್ತದಲ್ಲಿ ಪಟಾಕಿ ಸಿಡಿಸಿ ಕಾರ್ಯಕರ್ತರು ಸಂಭ್ರಮಾಚರಣೆ ಮಾಡಿದರು. ಸೋಮವಾರ ಸಂಜೆ 6ಗಂಟೆಗೆ ತಿಮ್ಮಾಪುರಿ ವೃತ್ತದಲ್ಲಿ ಜಮಾಯಿಸಿದ ಬಿಜೆಪಿ ಶಾಸಕ, ಮುಖಂಡರು ಹಾಗೂ ಕಾರ್ಯಕರ್ತರು ಸಂಭ್ರಮಿಸಿದರು. ಪಶ್ಚಿಮ ಬಂಗಾಳ, ಅಸ್ಸಾಂ, ಪುದುಚೇರಿಯಲ್ಲಿ ಬಿಜೆಪಿ ಜಯ ಸಾಧಿಸಿದ್ದು, ತಮಿಳುನಾಡಿನಲ್ಲಿ ಬಿಜೆಪಿ ಬೆಂಬಲಿತ ಅಭ್ಯರ್ಥಿಗಳು ಗೆಲುವು ಸಾಧಿಸಿದ್ದಾರೆ. ಈ ವೇಳೆ ಬಿಜೆಪಿ ಪಕ್ಷದ ಅಭ್ಯರ್ಥಿಗಳಿಗೆ ಗೆಲುವಿನಲ್ಲಿ ಸಹಕರಿಸಿದ ಮತದಾರರಿಗೆ ಅಭಿನಂದನೆ ಸಲ್ಲಿಸಿದರು. ಇದೇ ವೇಳೆಯಲ್ಲಿ ಮಾತನಾಡಿದ ಗ್ರಾಮೀಣ ಮತಕ್ಷೇತ್ರದ ಬಿಜೆಪಿ ಶಾಸಕ ಬಸವರಾಜ ಮತ್ತಿಮಡು, ಪಂಚ ರಾಜ್ಯಗಳ ಚುನಾವಣೆಯಲ್ಲಿ ಮೂರು ರಾಜ್ಯದಲ್ಲಿ ಬಿಜೆಪಿ ಅಧಿಕಾರಕ್ಕೆ ಏರುತ್ತಿರುವುದು ತುಂಬಾ ಖುಷಿ ಎನಿಸುತ್ತಿದೆ. ಇದಕ್ಕೆ ಶ್ರಮಿಸಿದ ನರೇಂದ್ರ ಮೋದಿ, ಗೃಹ ಸಚಿವ ಅಮಿತ್ ಶಾ, ರಾಷ್ಟ್ರೀಯ ಅಧ್ಯಕ್ಷ ನಿತಿನ್ ನಬೀನ್ ಅವರಿಗೆ ವಿಶೇಷವಾಗಿ ಅಭಿನಂದನೆಗಳು. ಪಶ್ಚಿಮಬಂಗಾಳದಲ್ಲಿ ದೀದಿಯನ್ನು ಸೋಲಿಸಿ, ಬಿಜೆಪಿ ಭರ್ಜರಿ ಗೆಲುವು ಸಾಧಿಸಿರುವುದು ಇತಿಹಾಸದ ಪುಟಗಳಲ್ಲಿ ಸೇರಿದೆ ಎಂದು ಹೇಳಿದರು. ಬಿಜೆಪಿ ಜಿಲ್ಲಾಧ್ಯಕ್ಷ ಅಶೋಕ ಬಗಲಿ ಮಾತನಾಡಿದರು.

ವಿಜಯೋತ್ಸವ ವೇಳೆಯಲ್ಲಿ ಮಾಜಿ ಎಂಎಲ್ಸಿ ಅಮರನಾಥ್ ಪಾಟೀಲ್, ಶರಣಪ್ಪ ತಳವಾರ, ಅಂಬಾರಾಯ ಅಷ್ಟಗಿ, ಶಿವ ಅಷ್ಟಗಿ, ಸುಧಾ ಹಾಲಕೈ, ಹನುಮಂತರಾಯ ಮಾಲಾಜಿ, ವೀರೇಶ್ ನೀಲಾ, ಸಚಿನ ಕಡಗಂಚಿ, ಗಿರಿರಾಜ್ ಯಳಮೇಲಿ, ಸಂತೋಷ್ ಹಾದಿಮನಿ, ಉಮೇಶ್ ಪಾಟೀಲ್, ಶಿವಯೋಗಿ ನಾಗೇನಹಳ್ಳಿ, ಸಿದ್ದಾಜಿ ಪಾಟೀಲ್, ವಿದ್ಯಾಸಾಗರ ಕುಲಕರ್ಣಿ, ಧರ್ಮಣ್ಣಾ ಇಟಗಾ, ರಾಜು ನಾಗೇನಹಳ್ಳಿ, ಶಿವಕುಮಾರ್ ಪೋಚಾಲಿ, ಸವಿತಾ ಪಾಟೀಲ್, ಶೋಭಾ ಬಾಗೇವಾಡಿ, ಸುನಂದಾ ಪಾಟೀಲ್, ಸಪ್ನಾ ಮಂಗಲಗಿ, ರವಿಚಂದ್ರ ಕಾಂತಿಕರ್, ಬಾಬುರಾವ್ ಹಾಗರಗುಂಡಗಿ, ಮಲ್ಲಿಕಾರ್ಜುನ ಓಕಳಿ, ಮಹೇಶ್ ಚೌಹಾಣ್ ಸೇರಿದಂತೆ ಪಕ್ಷದ ಹಲವು ಕಾರ್ಯಕರ್ತರು ಪಾಲ್ಗೊಂಡಿದ್ದರು.

ಅಪಘಾತದಲ್ಲಿ ಮೃತಪಟ್ಟ ಕೆಕೆಆರ್‌ಟಿಸಿ ನೌಕರರ ಕುಟುಂಬಗಳಿಗೆ ತಲಾ 1 ಕೋಟಿ ರೂ. ಪರಿಹಾರ ವಿತರಣೆ



ಕಲಬುರಗಿ,ಮೇ.05-

ಅಪಘಾತದಲ್ಲಿ ಮೃತಪಟ್ಟ ಕೆಕೆಆರ್‌ಟಿಸಿ ನೌಕರರ ಕುಟುಂಬಗಳಿಗೆ ತಲಾ 1 ಕೋಟಿ ರೂ. ಗಳ ಪರಿಹಾರ ಚೆಕ್‌ಗಳನ್ನು ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ಅಧ್ಯಕ್ಷ ಅರುಣಕುಮಾರ ಎಂ.ವೈ.ಪಾಟೀಲ್ ವಿತರಿಸಿದರು.

ನಗರದ ಕೆಕೆಆರ್‌ಟಿಸಿ ಕೇಂದ್ರ ಕಚೇರಿಯ ಸಭಾಂಗಣದಲ್ಲಿ ಸೋಮವಾರ ನಡೆದ ಕಾರ್ಯಕ್ರಮದಲ್ಲಿ, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಜೊತೆಗೆ ಮಾಡಿಕೊಂಡಿರುವ ಒಪ್ಪಂದದನ್ವಯ ಈ ಪರಿಹಾರ ವಿತರಣೆ ನಡೆಯಿತು.

ಅಪಘಾತದಲ್ಲಿ ಮೃತಪಟ್ಟ ಕೊಪ್ಪಳ ವಿಭಾಗದ ಕುಕನೂರಿನ ನಿರ್ವಾಹಕ ಉಮೇಶ ಹಾಗೂ ಯಾದಗಿರಿ ವಿಭಾಗದ ಚಾಲಕ ರವಿ ಅವರ ಕುಟುಂಬಸ್ಥರಾದ ವಿಜಯಲಕ್ಷ್ಮಿ ಮತ್ತು ಪಾರ್ವತಿ ಅವರಿಗೆ ತಲಾ 1 ಕೋಟಿ ರೂ. ಗಳ ಚೆಕ್‌ಗಳನ್ನು ನೀಡಲಾಯಿತು.

ಇದರ ಜೊತೆಗೆ, ಸಂಸ್ಥೆಯ ಆಂತರಿಕ ಗುಂಪು ವಿಮಾ ಯೋಜನೆಯಡಿ ಮೃತಪಟ್ಟ ಇನ್ನೂ 7 ನೌಕರರ ಅವಲಂಬಿತರಿಗೆ ತಲಾ 10 ಲಕ್ಷದಿಂದ 12.50 ಲಕ್ಷದವರೆಗೆ ಪರಿಹಾರ ಮೊತ್ತ ವಿತರಿಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಅಧ್ಯಕ್ಷ ಅರುಣಕುಮಾರ ಪಾಟೀಲ್, ''ಮೃತರ ಜೀವ ಅಮೂಲ್ಯವಾದದ್ದು. ಅದನ್ನು ಮರಳಿ ತರಲು ಸಾಧ್ಯವಿಲ್ಲ. ಆದರೆ ಅವರ ಕುಟುಂಬದ ಆರ್ಥಿಕ ಭದ್ರತೆ ಹಾಗೂ ಮಕ್ಕಳ ವಿದ್ಯಾಭ್ಯಾಸಕ್ಕಾಗಿ 1 ಕೋಟಿ ರೂ. ಗಳ ವಿಮೆ ಯೋಜನೆ ನೆರವಾಗಲಿದೆ ಎಂದರು.

ಕೆ.ಕೆ.ಆರ್.ಟಿ.ಸಿ ವ್ಯವಸ್ಥಾಪಕ ನಿರ್ದೇಶಕಿ ಡಾ. ಬಿ. ಸುಶೀಲಾ ಮಾತನಾಡಿ, ನಿಗಮದ ಸಿಬ್ಬಂದಿ ಶ್ರಮಪಟ್ಟು ಕೆಲಸ ಮಾಡುತ್ತಿದ್ದಾರೆ. ಅವರಿಗೆ ಅಗತ್ಯ ಸೌಲಭ್ಯಗಳನ್ನು ಒದಗಿಸುವುದು ಸಂಸ್ಥೆಯ ಜವಾಬ್ದಾರಿ. ಪರಿಹಾರ ಮೊತ್ತವನ್ನು ಕುಟುಂಬಸ್ಥರು ಸೂಕ್ತವಾಗಿ ಬಳಸಿಕೊಂಡು ಮಕ್ಕಳ ಶಿಕ್ಷಣಕ್ಕೆ ಪ್ರಾಮುಖ್ಯತೆ ನೀಡಬೇಕು ಎಂದು ಸಲಹೆ ನೀಡಿದರು.

2022ರಿಂದ 2026ರವರೆಗೆ ಸೇವಾವಧಿಯಲ್ಲಿ ಮೃತಪಟ್ಟ ನೌಕರರ ಅವಲಂಬಿತರಿಗೆ ಆಂತರಿಕ ಗುಂಪು ವಿಮಾ ಯೋಜನೆಯಡಿ ಇದುವರೆಗೆ 380 ಪ್ರಕರಣಗಳಲ್ಲಿ ಒಟ್ಟು 38 ಕೋಟಿ ರೂ. ಪರಿಹಾರ ವಿತರಿಸಲಾಗಿದೆ ಎಂದು ಅವರು ಮಾಹಿತಿ ನೀಡಿದರು.

ಎಸ್‌ಬಿಐ ಪ್ರಾದೇಶಿಕ ವ್ಯವಸ್ಥಾಪಕ ಅನಿಲ್ ಬಿಹಾರಿ ಮಾತನಾಡಿ, ಅಪಘಾತಕ್ಕೊಳಗಾದ ಸಿಬ್ಬಂದಿಗೆ ತುರ್ತು ನೆರವು ಒದಗಿಸುವ ಪ್ರಕ್ರಿಯೆಯನ್ನು ಬ್ಯಾಂಕ್‌ನಲ್ಲಿ ಸರಳಗೊಳಿಸಲಾಗಿದೆ ಎಂದರು.

ಈ ಸಂದರ್ಭದಲ್ಲಿ ಎಸ್.ಬಿ.ಐ ಬ್ಯಾಂಕ್ ಮುಖ್ಯ ವ್ಯವಸ್ಥಾಪಕ ರಾಹುಲ್ ಮಿತ್ತಲ್, ಎಸ್.ಬಿ.ಐ ಬ್ಯಾಂಕ್ ಮುಖ್ಯ ಪ್ರಬಂಧಕ ರಾಜೇಶ ಕುಮಾರ್ ನಾಯ್ಕು, ವಿಜಯನಗರ ಶಾಖಾ ಮುಖ್ಯಸ್ಥ ಶರಣಕುಮಾರ, ಮುಖ್ಯ ಲೇಖಾಧಿಕಾರಿ ಬಸವರಾಜ ಬೆಳಗಾವಿ, ಮುಖ್ಯ ಭದ್ರತಾ ಮತ್ತು ಕಾನೂನು ಅಧಿಕಾರಿ ಎಸ್.ಭಾವಿಕಟ್ಟಿ, ವಿಭಾಗದ ಕಾರ್ಮಿಕ ಕಲ್ಯಾಣಾಧಿಕಾರಿ ಮಹಿಪಾಲ ಬೇಗಾರ, ಮುಖ್ಯ ತಾಂತ್ರಿಕ ಶಿಲ್ಪಿ ಸಂತೋಷ ಗೋಗೇರಿ ಉಪಸ್ಥಿತರಿದ್ದರು.

ಕೆರೆಯಲ್ಲಿ ಮುಳುಗಿ ನಾಲ್ವರು ಮಕ್ಕಳು ಸಾವು, ಒಬ್ಬನ ಸ್ಥಿತಿ ಗಂಭೀರ; ಚಿಕ್ಕಮಗಳೂರು ಜಿಲ್ಲಾಸ್ಪತ್ರೆ ಮುಂಭಾಗ ಕುಟುಂಬಸ್ಥರ ಆಕ್ರಂದನ

ಚಿಕ್ಕಮಗಳೂರು,ಮೇ.05

ಬಾತುಕೋಳಿ ಹಿಡಿಯಲು ಕೆರೆಗೆ ಇಳಿದ ನಾಲ್ವರು ಮಕ್ಕಳು ನೀರು ಪಾಲಾದ ದುರ್ಘಟನೆ ಚಿಕ್ಕಮಗಳೂರು ತಾಲೂಕಿನ ಅರಳಗುಪ್ಪೆ ಗ್ರಾಮದ ಕಾರಂಜಿ ಕೆರೆಯಲ್ಲಿ ಸೋಮವಾರ ನಡೆದಿದೆ. ಮಕ್ಕಳು ಮೃತಪಟ್ಟಿರುವ ಘಟನೆ ತಿಳಿಯುತ್ತಿದ್ದಂತೆ ಗ್ರಾಮದಲ್ಲಿ ಶೋಕದ ವಾತಾವರಣ ನಿರ್ಮಾಣವಾಗಿದೆ.

ಮಹಾದಿಯಾ, ಅರುನುಸ್, ನಾಯುಸ್ ಮತ್ತು ಅಬ್ದುಲ್ ರೆಹಮಾನ್ ಎಂಬ ನಾಲ್ವರು ಮಕ್ಕಳು ಮೃತಪಟ್ಟವರಾಗಿದ್ದು, ಇವರು ಎಲ್ಲರೂ 5 ರಿಂದ 12 ವರ್ಷದೊಳಗಿನವರಾಗಿದ್ದಾರೆ.

ಇದೇ ವೇಳೆ ನಾಲ್ಕು ವರ್ಷದ ಅರ್ಮಾನ್ ಎಂಬ ಮಗು ಪ್ರಾಣಾಪಾಯದಿಂದ ಪಾರಾಗಿದ್ದು, ಗಂಭೀರ ಸ್ಥಿತಿಯಲ್ಲಿದ್ದಾನೆ. ಆತನಿಗೆ ಜಿಲ್ಲಾಸ್ಪತ್ರೆಯಲ್ಲಿ ಚಿಕಿತ್ಸೆ ಮುಂದುವರಿದಿದೆ.

ಪೊಲೀಸರು ತಿಳಿಸಿದ್ದು ಹೀಗೆ: ಸಂಬಂಧಿಕರ ಮನೆಗೆ ಬಂದಿದ್ದ ಮಕ್ಕಳು ಆಟವಾಡುತ್ತಿದ್ದ ವೇಳೆ ಬಾತುಕೋಳಿ ಕೆರೆಗೆ ಹೋಗಿರುವುದನ್ನು ನೋಡಿ ಅದನ್ನು ಹಿಡಿಯಲು ಕೆರೆಗೆ ಇಳಿದಿದ್ದಾರೆ. ಈ ವೇಳೆ ಆಳವಾದ ನೀರಿನಲ್ಲಿ ಮುಳುಗಿ ನಾಲ್ವರು ಮಕ್ಕಳು ಸಾವನ್ನಪ್ಪಿದ್ದಾರೆ. ಈ ಘಟನೆ ತಿಳಿದ ತಕ್ಷಣ ಸ್ಥಳೀಯರು ಹಾಗೂ ಪೋಷಕರು ಕೆರೆಗೆ ಧಾವಿಸಿ ಮಕ್ಕಳನ್ನು ರಕ್ಷಿಸಲು ಯತ್ನಿಸಿದರೂ ಫಲಕಾರಿಯಾಗಿಲ್ಲ ಎಂದು ಪೊಲೀಸರು ತಿಳಿಸಿದ್ದಾರೆ.

ಘಟನೆ ನಡೆದ ಸ್ಥಳಕ್ಕೆ ಗ್ರಾಮಾಂತರ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಮೃತದೇಹಗಳನ್ನು ಹೊರತೆಗೆದು ಮುಂದಿನ ಕ್ರಮ



ಕೈಗೊಂಡಿದ್ದು, ಎಲ್ಲಾ ಮೃತದೇಹಗಳನ್ನು ಜಿಲ್ಲಾ ಆಸ್ಪತ್ರೆಗೆ ರವಾನೆ ಮಾಡಲಾಗಿದೆ. ಈ ಕುರಿತು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಜಿಲ್ಲಾ ಸರ್ಕಾರಿ ಆಸ್ಪತ್ರೆ ಮುಂಭಾಗದಲ್ಲಿ ಮೃತ ಮಕ್ಕಳ ಪೋಷಕರ ಆಕ್ರಂದನ ಮುಗಿಲು ಮುಟ್ಟಿದ್ದು, ಗ್ರಾಮಸ್ಥರು ಹಾಗೂ ಕುಟುಂಬದ ಸದಸ್ಯರು ಕಣ್ಣೀರಿನಲ್ಲಿ ಕೈ ತೊಳೆಯುವಂತಾಗಿದೆ.

ನಾಲ್ವರು ಮಕ್ಕಳನ್ನು ಕಳೆದುಕೊಂಡ ಕುಟುಂಬ ಸದಸ್ಯರಲ್ಲಿ ದುಃಖ ಮಡುಗಟ್ಟಿದೆ. ಈ ದುರ್ಘಟನೆಯಿಂದ ಗ್ರಾಮದಲ್ಲಿ ನೀರವ ಮೌನ ಆವರಿಸಿದೆ. ಮಕ್ಕಳ ಸುರಕ್ಷತೆ ಬಗ್ಗೆ ಎಚ್ಚರಿಕೆ ಅಗತ್ಯವಿದೆ ಎಂಬ ಮಾತುಗಳು ಕೇಳಿ ಬರುತ್ತಿವೆ.

ಈ ಕುರಿತು ಗ್ರಾಮಾಂತರ ಪೊಲೀಸ್ ಠಾಣೆಯ ಠಾಣಾಧಿಕಾರಿ ಸುದ್ದಿಗಾರರಿಗೆ ಪ್ರತಿಕ್ರಿಯೆ ನೀಡಿದ್ದು, 'ಚಿಕ್ಕಮಗಳೂರು ತಾಲೂಕಿನ ಅರಳುಗುಪ್ಪೆಯ ಕಾರಂಜಿ ಕೆರೆಯ ಬಳಿ ಐದು ಮಕ್ಕಳು ಆಟವಾಡಲು ಹೋದಂತಹ ಸಂದರ್ಭದಲ್ಲಿ, 5 ಮಕ್ಕಳು ನೀರಿಗೆ ಬಿದ್ದು ಸಾವು ಬದುಕಿನ ಮಧ್ಯೆ ಹೋರಾಟ ಮಾಡಿವೆ. ಇದರಲ್ಲಿ ನಾಲ್ಕು ಜನ ಮಕ್ಕಳು ಕೆರೆಯಲ್ಲಿ ಮುಳುಗಿ ಸಾವನ್ನಪ್ಪಿದ್ದು, ಒಂದು ಮಗು ಮಾತ್ರ ಅದೃಷ್ಟವಶಾತ್ ಪ್ರಾಣಾಪಾಯದಿಂದ ಪಾರಾಗಿದೆ. ಎಲ್ಲರ ಮೃತದೇಹಗಳನ್ನು ಜಿಲ್ಲಾಸ್ಪತ್ರೆಗೆ ರವಾನೆ ಮಾಡಲಾಗಿದೆ. ಶವ ಪರೀಕ್ಷೆಯ ನಂತರ ಮಕ್ಕಳ ಮೃತದೇಹವನ್ನು ಕುಟುಂಬದ ಸದಸ್ಯರಿಗೆ ಹಸ್ತಾಂತರ ಮಾಡಲಾಗುವುದು. ಈ ಕುರಿತು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಯುಡಿಆರ್ ಅಡಿಯಲ್ಲಿ ಪ್ರಕರಣ ದಾಖಲಾಗಿದ್ದು, ನಾವು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದೇವೆ. ಈ ಕುರಿತು ಪ್ರಕರಣ ದಾಖಲಿಸಿಕೊಂಡು, ಈ ಘಟನೆಗೆ ನಿಖರವಾದ ಕಾರಣ ಏನೆಂಬುದನ್ನು ತಿಳಿಯಲು ತನಿಖೆಯನ್ನು ಮುಂದುವರಿಸಿದ್ದೇವೆ' ಎಂದು ಹೇಳಿದರು.

''ಸಪ್ತ ತಾಂಡವ''ದಲ್ಲಿ ಕಂಗೊಳಿಸಿದ ಆದಿತ್ರಿ ರಂಗಪ್ರವೇಶ ಭಕ್ತಿ, ಶಿಸ್ತು, ಕಲೆಗಳ ಅದ್ಭುತ ಸಂಗಮ



ಬೆಂಗಳೂರು,ಮೇ.05-

ಭರತನಾಟ್ಯದ ಸೌಂದರ್ಯ, ಭಕ್ತಿ ಮತ್ತು ಶಿಸ್ತಿನ ಮೆರಗು ತುಂಬಿದ ವಿಶಿಷ್ಟ ರಂಗಪ್ರವೇಶ ಕಾರ್ಯಕ್ರಮದಲ್ಲಿ 10ನೇ ತರಗತಿ ವಿದ್ಯಾರ್ಥಿನಿ ಆದಿತ್ರಿ, ತನ್ನ ಅದ್ಭುತ ನೃತ್ಯಪ್ರತಿಭೆಯಿಂದ ಪ್ರೇಕ್ಷಕರ ಮನಸೆಳೆದಳು. ಈ ಕಾರ್ಯಕ್ರಮವು ಸಮರ್ಥನಂ ಆಡಿಟೋರಿಯಂ, ಎಚ್‌ಎಸ್‌ಆರ್ ಲೇಔಟ್, ಬೆಂಗಳೂರು ನಲ್ಲಿ ವಿಜೃಂಭಣೆಯಿಂದ ನೆರವೇರಿತು.

ಸಂಗೀತಾ ಎಂ. ವಾಲಿ ಮತ್ತು ಶ್ರೀ ಮಧು ಬಿ. ವಾಲಿ ದಂಪತಿಗಳ ಪುತ್ರಿ ಆದ ಆದಿತ್ರಿ, ಗುರು ವಿದುಷಿ ಡಾ. ಪ್ರಿಯಾ ಗಣೇಶ್ ಅವರ ಶಿಷ್ಯೆಯಾಗಿದ್ದು, ಹಲವು ವರ್ಷಗಳ ಪರಿಶ್ರಮ, ಶಿಸ್ತು ಮತ್ತು ಕಲೆಯ ಮೇಲಿನ ಅಪಾರ ಭಕ್ತಿಯ ಫಲವಾಗಿ ಈ ರಂಗಪ್ರವೇಶವನ್ನು ಯಶಸ್ವಿಯಾಗಿ ನೆರವೇರಿಸಿದಳು.

ಕಾರ್ಯಕ್ರಮದ ಪ್ರಮುಖ ಆಕರ್ಷಣೆಯಾಗಿದ್ದ ''ಸಪ್ತ ತಾಂಡವ'' ಪ್ರದರ್ಶನವು ಶಿವನ ಏಳು ದೈವಿಕ ನೃತ್ಯ ರೂಪಗಳ ಆಧ್ಯಾತ್ಮಿಕ ತಾತ್ಪರ್ಯವನ್ನು ಮನಮೋಹಕವಾಗಿ ಮೂಡಿಸಿತು. ಈ ಪ್ರದರ್ಶನ ಪ್ರೇಕ್ಷಕರಿಗೆ ಆಧ್ಯಾತ್ಮಿಕ ಹಾಗೂ ಸಾಂಸ್ಕೃತಿಕ ಅನುಭವವನ್ನು ನೀಡಿತು.

ಪುಷ್ಪಾಂಜಲಿ ಮೂಲಕ ಆರಂಭಗೊಂಡ ಕಾರ್ಯಕ್ರಮವು ಗಣೇಶ ಸ್ತುತಿ, ನಟೇಶ ಕವಿತ್ವ, ತೋಡಿ ರಾಗದ ವರ್ಣಂ, ಸಪ್ತ ತಾಂಡವ, ತಿಲ್ಲಾನಾ ಮತ್ತು ಲಿಂಗಾಷ್ಟಕದಂತಹ ಸಂಪ್ರದಾಯಬದ್ಧ ಅಂಶಗಳೊಂದಿಗೆ ಕಲಾತ್ಮಕ ವೈಭವವನ್ನು ಮೆರೆದಿತು. ಪ್ರತಿಯೊಂದು ಅಂಶದಲ್ಲಿಯೂ ಆದಿತ್ರಿಯ ಅಭಿವ್ಯಕ್ತಿ, ಲಯಜ್ಞಾನ ಮತ್ತು ಅಂಗಶುದ್ಧಿ ವಿಶೇಷವಾಗಿ ಗಮನಸೆಳೆಯಿತು.

ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಪ್ರೊ. ಶ್ರೀಕಾಂತ ಎ.ಎಸ್ ಅವರು, ''ಇಂತಹ ಯುವ ಪ್ರತಿಭೆಗಳು ನಮ್ಮ ಭಾರತೀಯ ಸಂಸ್ಕೃತಿಯ ಶ್ರೀಮಂತ ಪರಂಪರೆಯನ್ನು ಮುಂದಿನ ಪೀಳಿಗೆಗೆ ಸಾಗಿಸುತ್ತಿರುವುದು ಸಂತಸದ ಸಂಗತಿ. ಆದಿತ್ರಿಯ ನೃತ್ಯದಲ್ಲಿ ಶಿಸ್ತು ಮತ್ತು ಆಳವಾದ ಅಭ್ಯಾಸ ಸ್ಪಷ್ಟವಾಗಿ ಗೋಚರಿಸಿತು,'' ಎಂದು ಅಭಿಪ್ರಾಯಪಟ್ಟರು.

ಗೌರವ ಅತಿಥಿಯಾದ ಕರ್ನಾಟಕ ಕಲಾಶ್ರೀ ಆಚಾರ್ಯ ಅಶೋಕ್ ಕುಮಾರ್ ಅವರು, ''ರಂಗಪ್ರವೇಶವು ಕೇವಲ ಆರಂಭವಲ್ಲ ಅದು ಕಲಾವಿದೆಯ ಜೀವನದ ಹೊಸ ಅಧ್ಯಾಯ. ಆದಿತ್ರಿಯ ನೃತ್ಯದಲ್ಲಿ ಆತ್ಮನಿಷ್ಠೆ ಮತ್ತು ಶ್ರದ್ಧೆ ಸ್ಪಷ್ಟವಾಗಿ ಕಾಣಿಸಿತು,'' ಎಂದು ಹೇಳಿದರು.

ಗುರು ವಿದುಷಿ ಡಾ. ಪ್ರಿಯಾ ಗಣೇಶ್ ಅವರು, ''ನೃತ್ಯವೆಂದರೆ ಕೇವಲ ಚಲನವಲನ ಅಲ್ಲ; ಅದು ಆತ್ಮದ ಅಭಿವ್ಯಕ್ತಿ. ಆದಿತ್ರಿ ಈ ಹಂತಕ್ಕೆ ತಲುಪಿರುವುದು ಅವಳ ಪರಿಶ್ರಮ, ಶಿಸ್ತು ಮತ್ತು ಕಲೆಯ ಮೇಲಿನ ಭಕ್ತಿಯ ಫಲ,'' ಎಂದು ಸಂತೋಷ ವ್ಯಕ್ತಪಡಿಸಿದರು.

ಕಾರ್ಯಕ್ರಮದ ಯಶಸ್ಸಿಗೆ ಸಂಗೀತ ಮತ್ತು ವಾದ್ಯಸಹಕಾರ ಮಹತ್ವದ ಪಾತ್ರವಹಿಸಿತು. ವೋಕಲ್‌ನಲ್ಲಿ ವಿದುಷಿ ವಸುಧಾ ಬಾಲಕೃಷ್ಣನ್, ಮೃದಂಗದಲ್ಲಿ ಶ್ರೀಹರಿ ರಂಗಸ್ವಾಮಿ, ಫ್ಲೂಟ್‌ನಲ್ಲಿ ನರಸಿಂಹ ಮೂರ್ತಿ ಮತ್ತು ನಟ್ಟುವಾಂಗದಲ್ಲಿ ಭುವನಾ ಎಸ್ ಅವರ ಸಹಕಾರ ನೃತ್ಯಕ್ಕೆ ಜೀವ ತುಂಬಿತು.

ಗುರು ಡಾ. ಪ್ರಿಯಾ ಗಣೇಶ್ ಅವರ ನೃತ್ಯ ಸಂಯೋಜನೆ ಮತ್ತು ಮಾರ್ಗದರ್ಶನ ಕಾರ್ಯಕ್ರಮದ ಪ್ರಮುಖ ಆಧಾರವಾಗಿದ್ದು, ಅವರ ಕಲಾಸೇವೆ ಎಲ್ಲರ ಪ್ರಶಂಸೆಗೆ ಪಾತ್ರವಾಯಿತು.

ಈ ರಂಗಪ್ರವೇಶವು ಕೇವಲ ನೃತ್ಯ ಪ್ರದರ್ಶನವಲ್ಲ; ಇದು ಕಲೆ, ಭಕ್ತಿ ಮತ್ತು ಸಂಸ್ಕೃತಿಯ ಸಂಭ್ರಮವಾಗಿತ್ತು. ಆದಿತ್ರಿಯ ಮುಂದಿನ ಕಲಾಯಾತ್ರೆಗೆ ಇದು ಭರವಸೆಯ ಆರಂಭವಾಗಿದೆ.



ನೀರಾವರಿ ಇಲಾಖೆಯ ಕಾರ್ಮಿಕರಿಗೆ ಬಾಕಿ ವೇತನ ನೀಡುವಂತೆ ಒತ್ತಾಯಿಸಿ ಧರಣಿ

ಗಂಗಾವತಿ,ಮೇ.05- ನೀರಾವರಿ ಇಲಾಖೆಯಲ್ಲಿ ಕೆಲಸ ಮಡುವಂತೆ ಕಾರ್ಮಿಕರಿಗೆ ಬಾಕಿ ವೇತನ ನುವಂತೆ ಒತ್ತಾಯಿಸಿ ತುಂಗಭದ್ರಾ ನೀರಾವರಿ ಕಾರ್ಮಿಕರ ಸಂಘ (ಎಐಸಿಸಿಟಿಯು) ವತಿಯಿಂದ ವಡ್ಡರಹಟ್ಟಿ ನೀರಾವರಿ ಇಲಾಖೆಯ ಕಚೇರಿ ಮುಂದೆ ಸಮವಾರ ಧರಣಿ ನಡೆಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಮಾತನಾಡಿದ ಸಂಘದ ಕೇಂದ್ರ ಸಮಿತಿಯ ಅಧ್ಯಕ್ಷ ಕೆ. ನಾಗಲಿಂಗಸ್ವಾಮಿ ಅವರು ಕಳೆದ ಹಲವು ತಿಂಗಳುಗಳಿಂದ ತುಂಗಭದ್ರಾ ನೀರಾವರಿ ಯೋಜನೆಯಲ್ಲಿ ಕೆಲಸ ನಿರ್ವಹಿಸುತ್ತಿರುವ ಕಾರ್ಮಿಕರಿಗೆ ಜನವರಿ, ಫೆಬ್ರವರಿ, ಮಾರ್ಚ್ ಹಾಗೂ ಏಪ್ರಿಲ್ ತಿಂಗಳ ವೇತನ ಪಾವತಿಸದೇ ನಿರ್ಲಕ್ಷ್ಯ ವಹಿಸಲಾಗಿದೆ ಎಂದು ಆರೋಪಿಸಿದರು. ಸಂಧಾನ ಸಭೆಗಳಲ್ಲಿ ಹಾಗೂ ಕಾರ್ಮಿಕ ಇಲಾಖೆಯ ಮುಂದಾಳತ್ವದಲ್ಲಿ ತೆಗೆದುಕೊಳ್ಳಲಾದ ನಿರ್ಧಾರಗಳನ್ನೂ ಜಾರಿಗೊಳಿಸದೇ ಇರುವುದರಿಂದ ಕಾರ್ಮಿಕರು ತೀವ್ರ ಆರ್ಥಿಕ ಸಂಕಷ್ಟ ಅನುಭವಿಸುತ್ತಿದ್ದಾರೆ ಎಂದು ತಿಳಿಸಿದರು.

ಕಾರ್ಮಿಕರಿಗೆ ಉದ್ಯೋಗ ಭದ್ರತೆ, ಕನಿಷ್ಠ ವೇತನ, ಇಎಸ್‌ಐ, ಪಿಎಫ್ ಸೇರಿದಂತೆ ಕಾನೂನುಬದ್ಧ ಸೌಲಭ್ಯಗಳನ್ನು ನೀಡಬೇಕಾದ ಸರ್ಕಾರದ ಸಂಸ್ಥೆಯೆ ಕಾರ್ಮಿಕ ಕಾಯ್ದೆಗಳನ್ನು ಉಲ್ಲಂಘಿಸುತ್ತಿರುವುದು ಖಂಡನೀಯವಾಗಿದೆ ಎಂದರು. ಟೆಂಡರ್ ಪ್ರಕ್ರಿಯೆಯ ವಿಳಂಬದ ಹೆಸರಿನಲ್ಲಿ ಕಾರ್ಮಿಕರನ್ನು ಕೆಲಸದಿಂದ ದೂರ ಇಡುವುದು ಹಾಗೂ ಗುತ್ತಿಗೆದಾರರ ಮೂಲಕ ಕೆಲಸ ಮಾಡಿಸುವುದು ಕಾರ್ಮಿಕ ವಿರೋಧಿ ಕ್ರಮವಾಗಿದೆ ಎಂದು ದೂರಿದರು. ಸಂಘದ ಪ್ರಮುಖ ಬೇಡಿಕೆಗಳಾದ ಬಾಕಿ ಇರುವ ಎಲ್ಲಾ ವೇತನವನ್ನು ತಕ್ಷಣ ಪಾವತಿಸಬೇಕು, ಕಾರ್ಮಿಕ ನ್ಯಾಯಾಲಯ ಮತ್ತು ಸರ್ಕಾರದ ನಿರ್ದೇಶನಗಳನ್ನು ಜಾರಿಗೊಳಿಸಬೇಕು, ಕಾರ್ಮಿಕ ಕಾಯ್ದೆಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು, ವೇತನ ವ್ಯತ್ಯಾಸದ ಮೊತ್ತವನ್ನು ಕಾರ್ಮಿಕರ ಖಾತೆಗೆ ಜಮಾ ಮಾಡಬೇಕು, ಕಾರ್ಮಿಕರಿಗೆ ನಿರಂತರ ಕೆಲಸ ಹಾಗೂ ಉದ್ಯೋಗ ಭದ್ರತೆ ನೀಡಬೇಕು, ಎಂದು ಎಚ್ಚರಿಸಿದರು.

ಧರಣಿ ನೇತೃತ್ವವನ್ನು ವಡ್ಡರಹಟ್ಟಿ ಉಪ ವಿಭಾಗದ ಅಧ್ಯಕ್ಷರಾದ ಶರಣಬಸವ ಹೇರೂರು, ಕಾರಟಗಿ ಉಪ ವಿಭಾಗದ ಅಧ್ಯಕ್ಷ ಹುಚ್ಚಯ್ಯ ಸ್ವಾಮಿ , ಎಐಸಿಸಿಟಿಯು ಜಿಲ್ಲಾಧ್ಯಕ್ಷ ವಿಜಯ್ ದೊರೆರಾಜು. ಮತ್ತು ಕಾರಟಗಿ ಉಪ ವಿಭಾಗದ ಕಾರ್ಮಿಕರು ಪಾಲ್ಗೊಂಡಿದ್ದರು.

ಒಂದನೇಯ ಪುಟದಿಂದ

ಬೇಸಿಗೆಯಲ್ಲಿ ನೀರಿನ ಸಮಸ್ಯೆ ಆಗದಂತೆ ಕ್ರಮ ಕೈಗೊಳ್ಳಿ - ಪ್ರಕಾಶ ಚೌಹ್ವಾಣ

ಮಾಡಲು ನಾಲೆಗೆ ನೀರು ಬಿಟ್ಟಾಗ ಬಹುತೇಕ ಕೆರೆಗಳನ್ನು ಭರ್ತಿ ಮಾಡಲಾಗಿದೆ. ಕೇಲವು ಕಡೆ ಕೊಳವೆ ಭಾವಿಯ ಮೂಲಕ ನೀರು ಸರಬರಾಜು ಮಾಡುತ್ತಿರುವುದರಿಂದ ಅಂತರ್ಜಲ ಮಟ್ಟ ಕುಸಿಯುತ್ತಿರುವದರಿಂದ ತೊಜದರೆಯಾಗುತ್ತಿದೆ. ಖಾಸಗಿಯವರಿಂದ ಬಾಡಿಗೆ ಪಡೆದು ನೀರು ಸರಬರಾಜು ಮಾಡಬೇಕು. ಪ್ರತಿ 15 ದಿನಕ್ಕೊಮ್ಮೆ ನೀರು ಪರೀಕ್ಷೆ ಮಾಡಿಸಿಕೊಂಡಿರಬೇಕು. ವಿದ್ಯುತ್ ತೊಂದರೆಯಾಗದಂತೆ ನೋಡಿಕೊಳಬೇಕು. ಅಂತಹ ಸಂದರ್ಭದಲ್ಲಿ ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡಿ, ಸಿರವಾರ ಪಟ್ಟಣದಲ್ಲಿ ಕೊಳವೆಭಾವಿಯ ಮೂಲಕ ನೀರು ಸರಬರಾಜು ಮಾಡುತ್ತಿರುವ ಕಾರಣ ವಿದ್ಯುತ್ ಕಡಿತವಾಗದಂತೆ ನೀಡಿಕೊಳಬೇಕು. ನೀರಿನ ಸಮಸ್ಯೆಯಾದರೆ ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡಿ ಎಂದರು. ಅನುದಾನ ಖಾಲಿ - ಪಿಡಿಒ ಅಳಲು :- ಗ್ರಾಮ ಪಂಚಾಯತಿಗಳಲ್ಲಿ ಅನುದಾನ ಖರ್ಚಾಗಿದೆ, ಪಂಚಾಯತಿಯಲ್ಲಿ ಯಾವುದೆ ಕಾಮಗಾರಿ ಮಾಡಲು ಏನು ಅನುದಾನ ಇಲಾ. ಹೆಸರಿಗೆ ಟಾಸ್ಕ್ ಪೋರ್ಸ್ ಸಮಿತಿ ಏನು ಅನುದಾನ ನೀಡುತ್ತಿಲ ಎಂದು ಪಿಡಿಒ ಅಳಲು ತೊಂಡಿಕೊಂಡರು. ಈ ಸಂದರ್ಭದಲ್ಲಿ ಬಿಇಒ ಚಂದ್ರಶೇಖರ ದೊಡ್ಡಮನೆ. ತಾ.ಪಂ ಇಒ ಈರೇಶನಾಯಕ, ಗ್ರಾ.ಪಂ ಆಡಳಿತಾದಿಕಾರಿಗಳಾದ ನಂದೀನಿ ಪಾಟೀಲ್, ವಿಜಯಲಕ್ಷ್ಮೀ, ರಾಜು ಕಾಂಬ್ಳೆ, ಟಿ.ಮಲ್ಲಿಕಾರ್ಜುನ, ಶಿವಾಜಿ ಚೌಹ್ವಾಣ, ಕವಿತಾಳ ಪ.ಪಂಚಾಯತಿ ಜಸ್ ಪಾಲ್ ಸಿಂಗ್, ಎಸ್ ಎಂ ಹುಸೇನ್, ಉಮೆಶ, ಪಿಡಿಒ ಮಮತ,ಷರಿಪ್, ಬಸವರಾಜ, ವಿಜಯಕುಮಾರ, ಶ್ರೀನಾಥ, ಶ್ರೀನಿವಾಸ ರೆಡ್ಡಿ, ಅರಳಪ್ಪ,ಟಿ ಲಕ್ಷ್ಮೀ ರೆಡ್ಡಿ, ಖಾಜಾಹುಸೇನ್, ರಾಮು ಸಿ, ಈಖಿಪ್ಪ, ಮಲ್ಲಪ್ಪ, ಬಿ.ನಾಗೇಂದ್ರ, ಇದರು.

ಸಿ.ಹೆಚ್. ಕಲಬೆರಿಕೆ ಹೆಂಡ ಮಾರಾಟ: ರಾಯಚೂರು ವಿಭಾಗೀಯ ದಂಡಾಧಿಕಾರಿಗಳಿಂದ ಇಬ್ಬರು ಆರೋಪಿಗಳ ಗಡಿಪಾರುಗೆ ಆದೇಶ

ಆರೋಪಿಗಳು ಆಯಾ ಪೋಲಿಸ್ ಠಾಣೆಯ ಠಾಣಾಧಿಕಾರಿಯವರ ಮುಂದೆ ಪ್ರತಿ ವಾರಕ್ಕೊಮ್ಮೆ ತಪ್ಪದೇ ಹಾಜರಾಗಬೇಕೆಂದು ರಾಯಚೂರು ಉಪ ವಿಭಾಗೀಯ ದಂಡಾಧಿಕಾರಿಗಳಾದ ಡಾ.ಹಂಪಣ್ಣ ಸಜ್ಜನ್ ಅವರು ಆದೇಶ ಹೊರಡಿಸಿದ್ದಾರೆ.

ಬೇಸಿಗೆಯಲ್ಲಿ ಆರೋಗ್ಯದ ರಕ್ಷಣೆಗೆ ಹೆಚ್ಚಿನ ಆದ್ಯತೆ ನೀಡಿ: ಡಾ.ಸುರೇಂದ್ರ ಬಾಬು

ವಹಿಸಬೇಕು. ಮಕ್ಕಳು ಅಸುರಕ್ಷಿತ ಆಹಾರ, ಪಾನೀಯ ಸೇವಿಸದಂತೆ ನಿಗಾವಹಿಸಿ.

ನವಜಾತ ಶಿಶುವಿನ ಬಗ್ಗೆ ಕಾಳಜಿ ಇರಲಿ: ಹೆರಿಗೆ ನಂತರ ಬಾಣಂತಿಯರು ನವಜಾತ ಶಿಶುವಿಗೆ ಮೇಲಿಂದ ಮೇಲೆ ಎದೆ ಹಾಲುಣಿ ಸುವ ಮೂಲಕ ಶಿಶುವಿನಲ್ಲಾಗುವ ನಿರ್ಜ ಲೀಕರಣ ತಡೆಯಲು ಸಹಕಾರಿಯಾಗುವುದು. ಯಾವುದೇ ಕಾರಣಕ್ಕೂ 6 ತಿಂಗಳೊಳಗಿನ ಮಗುವಿಗೆ ತಾಯಿ ಹಾಲು ಮಾತ್ರ ಕುಡಿಸಬೇಕು. ಅಲ್ಲದೆ ರೋಗ ನಿರೋಧಕ ಶಕ್ತಿ ವೃದ್ದಿಸಲು 12 ಮಾರಕ ರೋಗಗಳ ವಿರುದ್ಧ ಲಸಿಕೆ ಹಾಕಿಸಲು ಮರೆಯಬಾರದು.

ಜಿಲ್ಲಾ ಎನ್‌ಪೋರ್ಸಮೆಂಟ್ ಅಧಿಕಾರಿ ಡಾ.ಶಿವಕುಮಾರ ನಾರಾ ನೇತೃತ್ವದಲ್ಲಿ ಜಿಲ್ಲೆಯಾದ್ಯಂತ ಜಿಲ್ಲಾ ವಿಪತ್ತು ವಿಪತ್ತು ನಿರ್ವಹಣಾ ಪ್ರಾಧಿಕಾರದ ಮಾರ್ಗಸೂಚಿ ಯನ್ವಯ ಆರೋಗ್ಯ ಇಲಾಖೆ ಸಿಬ್ಬಂದಿ ಎಲ್ಲ ಆಸ್ಪತ್ರೆಯ ಬರುವ ಜನತೆಗೆ ಗ್ರಾಮಗಳಲ್ಲಿ ಹತ್ತಿ ಉಡುಪು ಬಳಕೆ, ಛತ್ರಿ, ಜೊತೆಯಲ್ಲಿ ನೀರು ಇರುವಂತೆ ಸಾರ್ವಜನಿಕರಿಗೆ ವ್ಯಾಪಕ ಪ್ರಚಾರ ಕೈಗೊಳ್ಳಲಾಗುತ್ತಿದೆ ಎಂದರು.

ಜಿಲ್ಲೆಯ ಎಲ್ಲ ಸರಕಾರಿ ಆಸ್ಪತ್ರೆಗಳಲ್ಲಿ ಓಆರ್‌ಎಸ್ ಜೀವ ಜಲ ಪ್ಯಾಕೇಟ್ ಸೇರಿ ದಂತೆ ಅಗತ್ಯ ಮುಂಜಾಗ್ರತಾ ಔಷಧಿಗಳು ಲಭ್ಯವಿವೆ. ಯಾವುದೇ ತುರ್ತು ಸಂದರ್ಭ ದಲ್ಲಿ 108ಕ್ಕೆ ಕರೆ ಮಾಡಿ ಆಂಬ್ಯುಲೆನ್ಸ್ ಸದುಪಯೋಗ ಪಡೆಯಬಹುದಾಗಿದೆ ಎಂದರು.

ಇದೇ ಸಂದರ್ಭದಲ್ಲಿ ಜಿಲ್ಲಾ ಸರ್ವೇಕ್ಷ ಣಾಧಿಕಾರಿ ಡಾ.ಗಣೇಶ ಕೆ., ತಾಲೂಕಾ ಆರೋಗ್ಯಾಧಿಕಾರಿ ಡಾ.ಬನದೇಶ್ವರ, ಸಾರ್ವ ಜನಿಕ ಆಸ್ಪತ್ರೆಯ ವೈದ್ಯರಾದ ಡಾ.ಗಂಗಾ ಧರ್, ಡಾ.ಶಿವಕುಮಾರ್, ಡಾ.ನಾಗರಾಜ ಮಲ್ಕಾಪೂರ, ಉಪ ಜಿಲ್ಲಾ ಆರೋಗ್ಯ ಶಿಕ್ಷಣಾ ಧಿಕಾರಿ ಶಿವಪ್ಪ, ಹಿರಿಯ ಆರೋಗ್ಯ ನಿರೀಕ್ಷ ಣಾಧಿಕಾರಿ ಸೋಮಪ್ಪ ಸೇರಿದಂತೆ ಸಿಬ್ಬಂದಿ ಯವರು ಹಾಗೂ ಸಾರ್ವಜನಿಕರು ಇದ್ದರು.

ಗಣತಿದಾರರು ಬಿಸಿಗಾಳಿಯ ಕುರಿತು ಮುನ್ನೆಚ್ಚರಿಕೆ ಕ್ರಮಗಳನ್ನು ಅನುಸರಿಸಲು ರಾಜ್ಯ ಜನಗಣತಿ ನೋಡಲ್ ಅಧಿಕಾರಿ ಮನೋಜ್ ಕುಮಾರ್ ಮೀನಾ ಸಲಹೆ

ಕಾರ್ಯವನ್ನು ಸುಗಮವಾಗಿ ನಡೆಸಲು ಸೂಕ್ತ ಮುನ್ನೆಚ್ಚರಿಕಾ ಕ್ರಮಗಳನ್ನು ಅನುಸರಿಸುವುದು ಅಗತ್ಯವಾಗಿದೆ. ಆದ್ದರಿಂದ ಉಷ್ಣ ಸಂಬಂಧಿತ ಅಪಾಯಗಳನ್ನು ತಗ್ಗಿಸಲು ಮತ್ತು ಗಣತಿ ಕಾರ್ಯವನ್ನು ಸುಗಮವಾಗಿ ನಡೆಸಲು ಕೆಳಗಿನ ಮುನ್ನೆಚ್ಚರಿಕಾ ಕ್ರಮಗಳನ್ನು ಎಲ್ಲಾ ಗಣತಿದಾರರು ಕಟ್ಟುನಿಟ್ಟಾಗಿ ಪಾಲಿಸಬೇಕು.

ಅತಿಯಾದ ಶ್ರಮ ತಪ್ಪಿಸಿ: ದಿನದ ತಂಪಾದ ಸಮಯಗಳಲ್ಲಿ (ಬೆಳಿಗ್ಗೆ ಬೇಗ ಮತ್ತು ಸಂಜೆ) ಕ್ಷೇತ್ರ ಭೇಟಿಗಳನ್ನು ಯೋಜಿಸಬೇಕು. ವಿಶೇಷವಾಗಿ ಮಧ್ಯಾಹ್ನ 12ರಿಂದ 3:30ರವರೆಗೆ ನೇರ ಸೂರ್ಯ ಕಿರಣಕ್ಕೆ ದೀರ್ಘಕಾಲ ಒಳಗಾಗುವು ದನ್ನು ತಪ್ಪಿ ಸಬೇಕು. ನೆರಳು ಅಥವಾ ತಂಪಾದ ಸ್ಥಳಗಳಲ್ಲಿ ಕಾಲಕಾಲಕ್ಕೆ ವಿಶ್ರಾಂತಿ ತೆಗೆದುಕೊಳ್ಳಬೇಕು. ದೇಹದ ನೀರಿನ ಪ್ರಮಾಣ ಕಾಪಾಡಿಕೊಳ್ಳಿ: ಯಾವಾಗಲೂ ಸಮರ್ಪಕವಾಗಿ ನೀರಿನ ಸೇವನೆ ಮಾಡಬೇಕು. ದಾಹವಾಗದಿದ್ದರೂ ಪ್ರತಿ 20-30 ನಿಮಿಷಕ್ಕೊಮ್ಮೆ ನೀರು ಕುಡಿಯಬೇಕು. ಕ್ಷೇತ್ರ ಭೇಟಿಗಳ ಸಮಯದಲ್ಲಿ ಕುಡಿಯುವ ನೀರನ್ನು ಕೊಂಡೊಯ್ಯಬೇಕು. ಸಾಧ್ಯವಾದಲ್ಲಿ ಮಜ್ಜಿಗೆ, ನಿಂಬೆ ಷರಬತ್ತು. ಎಳ ನೀರು, ಮೌಖಿಕ ಪುನರ್ಜಲೀಕರಣ ದ್ರಾವಣ ಅಥವಾ ಇತರೆ ಎಲೆಕ್ಟ್ರೋಲೈಟ್ ಪಾನೀಯಗಳನ್ನು ಸೇವಿಸಬೇಕು. ದೇಹದ ನೀರಿನ ಕೊರತೆಯನ್ನು ಹೆಚ್ಚಿಸುವ ಕ್ಯಾಫಿನ್ ಮತ್ತು ಸಕ್ಕರೆ ಪಾನೀಯ ಗಳನ್ನು ತಪ್ಪಿಸಬೇಕು. ರಕ್ಷಣಾತ್ಮಕ ಕ್ರಮಗಳು: ಸಡಿಲ ಮತ್ತು ಲಘು ಬಣ್ಣದ ಉಡುಪುಗಳನ್ನು ಧರಿಸಬೇಕು. ಟೋಪಿ, ಛತ್ರಿ ಮುಂತಾದ ರಕ್ಷಣಾತ್ಮಕ ಉಪಕರಣಗಳನ್ನು ಬಳಸಿಕೊಂಡು ನೇರ ಸೂರ್ಯಕಿರಣದಿಂದ ರಕ್ಷಿಸಿಕೊಳ್ಳಬೇಕು. ಸಾಧ್ಯವಾದಲ್ಲಿ ಸನ್‌ಸ್ಕ್ರೀನ್ ಬಳಸಿ ಬಿಸಿಲಿನ ಸುಡುವಿಕೆಯನ್ನು ತಪ್ಪಿಸಬೇಕು. ಆರೋಗ್ಯ ಮೇಲ್ವಿಚಾರಣೆ: ತಲೆಸುತ್ತು, ದಣಿವು, ತಲೆನೋ ವು, ವಾಂತಿ, ಅತಿಯಾದ ಬೆವರು ಅಥವಾ ಗೊಂದಲ ಮುಂತಾದ ಉಷ್ಣ ಸಂಬಂಧಿತ ಲಕ್ಷಣಗಳ ಬಗ್ಗೆ ಎಚ್ಚರಿಕೆಯಿಂದ ಇರಬೇಕು. ಇಂತಹ ಲಕ್ಷಣಗಳು ಕಂಡುಬಂದಲ್ಲಿ ತಕ್ಷಣ ನೆರಳು ಅಥವಾ ತಂಪಾದ ಸ್ಥಳಕ್ಕೆ ಹೋಗಿ, ಸಮರ್ಪ ಕವಾಗಿ ನೀರು ಸೇವಿಸಿ ಮತ್ತು ತಕ್ಷಣ ವೈದ್ಯಕೀಯ ಸಹಾಯ ಪಡೆಯಬೇಕು. ಮೊದಲಿನಿಂದ ಆರೋಗ್ಯ ಸಮಸ್ಯೆ ಇರುವವರು ಹೆಚ್ಚುವರಿ ಮುನ್ನೆಚ್ಚರಿಕೆ ವಹಿಸಬೇಕು. ಕ್ಷೇತ್ರ ಕರ್ತವ್ಯದ ವೇಳೆ ಸಮೀಪದ ಆರೋಗ್ಯ ಕೇಂದ್ರಗಳ ವಿವರಗಳು ಮತ್ತು ತುರ್ತು ಸಂಪರ್ಕ ದೂರವಾಣಿ ಸಂಖ್ಯೆಗಳನ್ನು ಸದಾ ಕೈಗೆಟುಕುವಂತೆ ಇಡಬೇಕು. ಎಲ್ಲಾ ಗಣಕರು ಈ ಸಲಹೆಗಳನ್ನು ಪಾಲಿಸಬೇಕು. ಮೇಲ್ವಿಚಾರಕ ಅಧಿಕಾರಿಗಳು ಈ ಸಲಹೆಗಳನ್ನು ಸರಿಯಾಗಿ ಪ್ರಸಾರ ಮಾಡುವುದನ್ನು ಮತ್ತು ಸಂಪೂರ್ಣವಾಗಿ ಅನುಸರಿಸುವುದನ್ನು ಖಚಿತಪಡಿಸಬೇಕೆಂದು ಪರಿಹಾರ ಆಯುಕ್ತರು ಮತ್ತು ಕಂದಾಯ ಇಲಾಖೆಯ ಸರ್ಕಾರದ ಕಾರ್ಯ ದರ್ಶಿ ಹಾಗೂ ರಾಜ್ಯ ಜನಗಣತಿ ನೋಡಲ್ ಅಧಿಕಾರಿಗಳಾದ ಮನೋಜ್ ಕುಮಾರ್ ಮೀನಾ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕೇವಲ 1 ವೋಟ್‌ನಿಂದ ಡಿಎಂಕೆ ಸಚಿವನಿಗೆ ಸೋಲು: ಟಿವಿಕೆ ಅಭ್ಯರ್ಥಿಗೆ ರೋಚಕ ಜಯ

ಚೆನ್ನೈ(ತಮಿಳುನಾಡು): ಇಲ್ಲಿನ ತಿರುಪ್ಪತ್ತೂರು ವಿಧಾನಸಭಾ ಕ್ಷೇತ್ರದಲ್ಲಿ ಟಿವಿಕೆ ಅಭ್ಯರ್ಥಿ ಶ್ರೀನಿವಾಸ ಸೇತುಪತಿ ಅವರು ಸಚಿವ ಪೆರಿಯಕರುಪ್ಪನ್ ಅವರನ್ನು ಕೇವಲ ಒಂದು ಮತದ ಅಂತರದಿಂದ ಸೋಲಿಸುವ ಮೂಲಕ ದೇಶದ ಗಮನ ಸೆಳೆದಿದ್ದಾರೆ.

ಶಿವಗಂಗಾ ಜಿಲ್ಲೆಯಲ್ಲಿ ನೆಲೆಗೊಂಡಿರುವ ತಿರುಪ್ಪತ್ತೂರು ವಿಧಾನಸಭಾ ಕ್ಷೇತ್ರ ಮಹತ್ವದ ಚುನಾವಣಾ ಜಿಲ್ಲೆಯಾಗಿದ್ದು, ಆಧ್ಯಾತ್ಮಿಕ ಮತ್ತು ಐತಿಹಾಸಿಕ ಪರಂಪರೆಯಿಂದಲೂ ಸಮೃದ್ಧವಾಗಿದೆ. ಇದು ಶಿವಗಂಗಾ ಸಂಸದೀಯ ಕ್ಷೇತ್ರದ ಅಡಿಯಲ್ಲಿ ಬರುತ್ತದೆ.

ಡಿಎಂಕೆ ಭದ್ರಕೋಟೆಯಲ್ಲಿ ರೋಚಕ ಹಣಾಹಣಿ: ತಿರುಪ್ಪತ್ತೂರು ಕ್ಷೇತ್ರವನ್ನು ಡಿಎಂಕೆಯ ಭದ್ರಕೋಟೆ ಎಂದೇ ವ್ಯಾಪಕವಾಗಿ ಪರಿಗಣಿಸಲಾಗಿದೆ. ಈ ಕ್ಷೇತ್ರದಲ್ಲಿ ಡಿಎಂಕೆ 8 ಬಾರಿ ಜಯಗಳಿಸಿತ್ತು. ಆದರೆ ಇದೇ ಮೊದಲ ಬಾರಿಗೆ ಚುನಾವಣೆಗೆ ಇಳಿದಿರುವ ಟಿವಿಕೆ ಪಕ್ಷವು ಡಿಎಂಕೆ ಕೋಟೆಯನ್ನು ಛಿದ್ರಗೊಳಿಸಿದೆ.

ಕೊನೆಯ ಸುತ್ತಿನಲ್ಲಿ ರೋಚಕ ಜಯ: ಮತ ಎಣಿಕೆ ಪ್ರಕ್ರಿಯೆಯಲ್ಲಿ, ಮೊದಲ ಮೂರು ಸುತ್ತುಗಳು ಪೂರ್ಣಗೊಳ್ಳುವವರೆಗೆ ಡಿಎಂಕೆ ಅಭ್ಯರ್ಥಿ ಪೆರಿಯಕರುಪ್ಪನ್ 10,533 ಮತಗಳನ್ನು ಪಡೆದಿದ್ದರು. ಟಿವಿಕೆ ಅಭ್ಯರ್ಥಿ ಶ್ರೀನಿವಾಸ ಸೇತುಪತಿ 8,861 ಮತಗಳೊಂದಿಗೆ ಎರಡನೇ ಸ್ಥಾನದಲ್ಲಿದ್ದರೆ, ಬಿಜೆಪಿ ಅಭ್ಯರ್ಥಿ ತಿರುಮಾರನ್ 4,175 ಮತಗಳೊಂದಿಗೆ ಮೂರನೇ ಸ್ಥಾನದಲ್ಲಿದ್ದರು. ಬಳಿಕ ಇಬ್ಬರ ಮಧ್ಯೆ ನೇರಾನೇರ ಸ್ಪರ್ಧೆ ಏರ್ಪಟ್ಟಿತ್ತು. 30ನೇ ಸುತ್ತಿನ ಕೊನೆಯಲ್ಲಿ ಪೆರಿಯಕರುಪ್ಪನ್ 83,374 ಮತಗಳನ್ನು ಪಡೆದರೆ, ಶ್ರೀನಿವಾಸ ಸೇತುಪತಿ 83,375 ಮತಗಳನ್ನು ಗಳಿಸಿದರು. ಇದರಿಂದಾಗಿ ತಿರುಪ್ಪತ್ತೂರು ಕ್ಷೇತ್ರವನ್ನು ಕೇವಲ ಒಂದು ಮತದ ಅಂತರದಿಂದ ಟಿವಿಕೆ ಜಯಿಸಿತು.

ಸಚಿವ, 4 ಬಾರಿ ಶಾಸಕನಿಗೆ ಸೋಲು: ಡಿಎಂಕೆಯ ಹಾಲಿ ಸಚಿವ ಮತ್ತು ನಾಲ್ಕು ಬಾರಿ ಸತತವಾಗಿ ಗೆದ್ದಿದ್ದ ಕೆ.ಆರ್.ಪೆರಿಯಕರುಪ್ಪನ್ ಅವರು ಈ ಬಾರಿಯೂ ತಿರುಪ್ಪತ್ತೂರು ಕ್ಷೇತ್ರದಿಂದ ಕಣಕ್ಕಿಳಿದಿದ್ದರು. ಆದರೆ ಈ ಸಲ ಮತದಾರರು 1 ಮತದಿಂದ ಸೋಲಿಸಿದ್ದಾರೆ. ಈ ಮೂಲಕ ಸತತ ಐದನೇ ಬಾರಿ ಗೆಲ್ಲುವ ಕನಸು ನನಸಾಗಲಿಲ್ಲ.

ಈ ಮೂಲಕ ಶಿವಗಂಗಾ ಜಿಲ್ಲೆಯ ನಾಲ್ಕು ವಿಧಾನಸಭಾ ಕ್ಷೇತ್ರಗಳಾದ ಶಿವಗಂಗಾ, ಮಾನಾಮದುರೈ, ಕಾರೈಕುಡಿ ಮತ್ತು ತಿರುಪ್ಪತ್ತೂರುಗಳನ್ನು ಟಿವಿಕೆ ವಶಪಡಿಸಿಕೊಂಡಿತು.

ತಮಿಳುನಾಡಿನಲ್ಲಿ ವಿಜಯ್ ಸರ್ಕಾರ್‌ಗೆ ಸಿದ್ಧತೆ: ತಮಿಳುನಾಡು ವಿಧಾನಸಭೆ ಫಲಿತಾಂಶದಲ್ಲಿ ಅತಿ ದೊಡ್ಡ ಪಕ್ಷವಾಗಿ ಹೊರಹೊಮ್ಮಿರುವ ಟಿವಿಕೆ, 108 ಕ್ಷೇತ್ರಗಳಲ್ಲಿ ಜಯಭೇರಿ ಬಾರಿಸಿದೆ. ಆದರೆ ಸರ್ಕಾರ ರಚನೆಗೆ 118 ಮ್ಯಾಜಿಕ್ ನಂಬರ್ ಅಗತ್ಯವಿದೆ. ಬಹುಮತದ ಹತ್ತಿರ ಇರುವ ಟಿವಿಕೆ ಸರ್ಕಾರ ರಚಿಸುವುದು ಖಚಿತವಾಗಿದೆ. ಆಡಳಿತಾರೂಢ ಡಿಎಂಕೆ ಹೀನಾಯ ಸೋಲನುಭವಿಸಿದ್ದು, 73 ಕ್ಷೇತ್ರಗಳಲ್ಲಿ ಮಾತ್ರ ಗೆದ್ದಿದೆ. ಎಐಡಿಎಂಕೆ 53ರಲ್ಲಿ ಜಯ ಸಾಧಿಸಿದೆ.

ನವೀಕೃತಗೊಂಡ ನೂತನ ಕಾಳಿಕಾದೇವಿ ಪ್ರಾಣ ಪ್ರತಿಷ್ಠಾಪನೆ ಬ್ರಹ್ಮಕುಂಭಾಭಿಷೇಕ




ಹೊಸಪೇಟೆ ,ಮೇ.05-

ಹೊಸಪೇಟೆ ನಗರ ಅಭಿವೃದ್ಧಿಯ ರಸ್ತೆ ಅಗಲೀಕರಣಕ್ಕೆ ಪ್ರಪ್ರಥಮವಾಗಿ ಬಿಟ್ಟುಕೊಟ್ಟ ಕಾಳಿಕಾ ದೇವಸ್ಥಾನ 15 ವರ್ಷಗಳ ನಂತರ ನವೀಕೃತ ದೇವಾಲಯ ಕಾಳಿಕಾ ದೇವಿಯ ದೇವಸ್ಥಾನ ಉದ್ಘಾಟನೆ ನೆರವೇರಿದ್ದು ಬ್ರಹ್ಮಕುಂಭಾಭಿಷೇಕದೊಂದಿಗೆ ಪರಿವಾರ ದೇವರಿಗೆ ಪೂಜೆ ಆರಂಭವಾಯಿತು. ಸೋಮವಾರ ಆನೆಗುಂದಿ ಸಂಸ್ಥಾನ ಸರಸ್ವತಿ ಪೀಠದ ಜಗದ್ಗುರು ಕಾಳಹಸ್ತೇಂದ್ರ ಸರಸ್ವತಿ ಮಹಾಸ್ವಾಮಿಗಳು ಆಶೀರ್ವಚನ ನೀಡಿದರು.

ನೂತನ ಗರ್ಭಗುಡಿಯ ಆಲಯ ಸಮರ್ಪಣೆ ಹಾಗೂ ಕಾಳಿಕಾದೇವಿ ಕಮಟೇಶ್ವರ ದೇವರ ಹಾಗೂ ಪರಿಹಾರ ದೇವರ ಅಷ್ಟಬಂದ ಪ್ರತಿಷ್ಠೆ ಬ್ರಹ್ಮಕಲಶೋತ್ಸವ ಹಾಗೂ ನವಚಂಡಿ ಯಾಗ ಸೇರಿದಂತೆ ವೈವಿಧ್ಯಮಯ ಧಾರ್ಮಿಕ ಕಾರ್ಯಕ್ರಮಗಳು ಏಪ್ರಿಲ್ 30 ರಿಂದ ಆರಂಭವಾಗಿದ್ದು, ಇಂದು ಗಣಪತಿ ಪೂಜೆ ದೇವತಾ ಪೂಜೆ ಬ್ರಹ್ಮ ಕುಂಭಾಭಿಷೇಕ ಪ್ರಾರ್ಥನೆ ಯೊಂದಿಗೆ ಪರಿವಾರ ದೇವರ ಕನಸಾಭಿಷೇಕ ಪ್ರಸನ್ನ ಪೂಜೆ ಶ್ರೀ ದೇವರಿಗೆ ಅಲಂಕಾರ ಸೇರಿದಂತೆ ವೈವಿಧ್ಯಮಯ ಧಾರ್ಮಿಕ ಕಾರ್ಯಕ್ರಮಗಳು ಜರುಗಿದವು.

ಬಳ್ಳಾರಿ ರಸ್ತೆಯ ಕಾಳಿಕಾದೇವಿ ದೇವಸ್ಥಾನದಲ್ಲಿ ನಡೆದ ಕಾರ್ಯಕ್ರಮದಲ್ಲಿ ನಾಗಮೂರ್ತಿಯೇಂದ್ರ ಮಹಾಸ್ವಾಮಿಗಳು, ನಾಗಲಿಂಗ ಮಹಾಸ್ವಾಮಿಗಳು, ಗುರುನಾಥ ಮಹಾಸ್ವಾಮಿಗಳು ಸಮ್ಮುಖದಲ್ಲಿ ಈ ಎಲ್ಲ ದಿನದ ಧಾರ್ಮಿಕ ಕಾರ್ಯಕ್ರಮಗಳು ವಿದ್ವಾನ್ ವೇದಬ್ರಹ್ಮ ತಡಚೆಲ್ಲಿ ವೀರ ರಾಘವ ಶರ್ಮಾ ನೇತೃತ್ವದಲ್ಲಿ ಜರುಗಿದವು. ಇಂದು ಮಧ್ಯಾಹ್ನ ವೇದಿಕೆಯಲ್ಲಿ ಜರುಗಿದ ಕಾರ್ಯಕ್ರಮದಲ್ಲಿ ದಾನಿಗಳಿಗೆ ಸನ್ಮಾನ, ಸಂಗೀತ ಕಾರ್ಯಕ್ರಮ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು ಸಹ ನಡೆದವು.ಚುನಾಯಿತ ಪ್ರತಿನಿಧಿಗಳು ಹಾಗೂ ಸಂಘ-ಸಂಸ್ಥೆಗಳ ಪ್ರತಿನಿಧಿಗಳು ಹಾಗೂ ವಿಶ್ವಕರ್ಮ ಸಮಾಜದ ಎಲ್ಲ ಬಂಧುಗಳು ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಜಿಲ್ಲಾಧ್ಯಕ್ಷ ಕೆ ವಿ ಪತ್ತಾರ್ ಪ್ರಧಾನ ಕಾರ್ಯದರ್ಶಿ ನಾಗರಾಜ್, ತಾಲೂಕ ಉಪಾಧ್ಯಕ್ಷ ವಿ. ಶಂಕರಾಚಾರ್ಯ, ತಾಲೂಕ ಪ್ರಧಾನ ಕಾರ್ಯದರ್ಶಿ ಸುರೇಶ್, ಪಟ್ಟಣ ಪೊಲೀಸ್ ಠಾಣೆ ಪಿಎಸ್‌ಐ ರಾಜಶೇಖರ್ ಕುಬೇರಚಾರ್ ಸೇರಿ ಸಮಾಜದ ಮುಖಂಡರು, ವಿಶ್ವ ಕರ್ಮ ಮಹಿಳಾ ಮಂಡಳಿ ಸದಸ್ಯರು ಪಾಲ್ಗೊಂಡಿದ್ದರು.



ಕಾನೂನು ಮತ್ತು ಸುವ್ಯವಸ್ಥೆ ವಿಭಾಗದ ಉಪ ಪೊಲೀಸ್ ಆಯುಕ್ತರಾಗಿ ಶಾಲೂ ಐಪಿಎಸ್ ಅಧಿಕಾರ ಸ್ವೀಕಾರ

ಕಲಬುರಗಿ,ಮೇ.05-

ನಗರದ ಕಾನೂನು ಮತ್ತು ಸುವ್ಯವಸ್ಥೆ ವಿಭಾಗದ ಉಪ ಪೊಲೀಸ್ ಆಯುಕ್ತರಾಗಿ (ಡಿಸಿಪಿ) ಯುವ ಐಪಿಎಸ್ ಅಧಿಕಾರಿ ಶಾಲೂ ಅವರು ಸೋಮವಾರ ಅಧಿಕೃತವಾಗಿ ಅಧಿಕಾರ ವಹಿಸಿಕೊಂಡರು. ರಾಜ್ಯ ಸರ್ಕಾರ ಇತ್ತೀಚೆಗೆ ಇವರನ್ನು ಈ ಹುದ್ದೆಗೆ ನೇಮಕ ಮಾಡಿತ್ತು.

ಮೂಲತಃ ಉತ್ತರ ಪ್ರದೇಶದ ಜೌನ್‌ಪುರ ಜಿಲ್ಲೆಯವರಾದ ಶಾಲೂ ಅವರು ಕಂಪ್ಯೂಟರ್ ಸೈನ್ಸ್ ನಲ್ಲಿ ಬಿ.ಟೆಕ್ ಪದವಿ ಪಡೆದಿದ್ದಾರೆ. ಕರ್ನಾಟಕ ಕೇಡರ್‌ನ 2021ರ ಬ್ಯಾಚ್‌ನ ಅಧಿಕಾರಿಯಾಗಿರುವ ಇವರು, ಈ ಹಿಂದೆ ಹಾಸನ ಜಿಲ್ಲೆಯ ಹೊಳೆನರಸಿಪುರದಲ್ಲಿ ಸಹಾಯಕ ಪೊಲೀಸ್ ವರಿಷ್ಠಾಧಿಕಾರಿಯಾಗಿ (ಎಎಸ್‌ಪಿ) ಸೇವೆ ಸಲ್ಲಿಸಿದ್ದರು. ಬಳಿಕ ಎಸ್‌ಪಿ ಹುದ್ದೆಗೆ ಬಡ್ತಿ ಪಡೆದು ಸಿಐಡಿಯ ವಿಶೇಷ ವಿಚಾರಣಾ ವಿಭಾಗದಲ್ಲಿ ಕಾರ್ಯನಿರ್ವಹಿಸಿದ್ದರು.

ಈಗ ಕಲಬುರಗಿಗೆ ಡಿಸಿಪಿಯಾಗಿ ನಿಯೋಜನೆಗೊಂಡಿರುವ ಅವರು, ಅಧಿಕಾರ ಸ್ವೀಕರಿಸಿದ ಬಳಿಕ ನಗರದಲ್ಲಿ ಶಾಂತಿ ಕಾಪಾಡುವುದು, ಸಾರ್ವಜನಿಕ ಸುರಕ್ಷತೆ ಮತ್ತು ಪರಿಣಾಮಕಾರಿ ಕಾನೂನು ಜಾರಿಗೆ ಆದ್ಯತೆ ನೀಡುವುದಾಗಿ ಹೇಳಿದರು.

ತಾಂತ್ರಿಕ ಹಿನ್ನೆಲೆ ಹಾಗೂ ತನಿಖಾ ಕ್ಷೇತ್ರದ ಅನುಭವ ಹೊಂದಿರುವ ಇವರ ನೇಮಕಾತಿಯಿಂದ ಕಲಬುರಗಿಯಲ್ಲಿ ಶಿಸ್ತುಬದ್ಧ ಆಡಳಿತ ಹಾಗೂ ಅಪರಾಧ ತಡೆಗೆ ಹೆಚ್ಚಿನ ಬಲ ಬರಲಿದೆ ಎಂದು ನಿರೀಕ್ಷಿಸಲಾಗಿದೆ.



208 ಕೈದಿಗಳ ಆರೋಗ್ಯ ತಪಾಸಣೆ

ಕಲಬುರಗಿ,ಮೇ.05-

ನಗರದ ಹೊರವಲಯದ ಕೇಂದ್ರ ಕಾರಾಗೃಹದಲ್ಲಿ ಇತ್ತೀಚೆಗೆ ಕೈದಿಗಳಿಗೆ ಮೋಹನ್ ರಾಜ್ ಚಾರಿಟಬಲ್ ಟ್ರಸ್ಟ್ ಆಸ್ಪತ್ರೆಯಿಂದ ಆರೋಗ್ಯ ತಪಾಸಣೆ ಉಚಿತ ಶಿಬಿರ ಆಯೋಜಿಸಲಾಗಿತ್ತು.

ಶಿಬಿರದಲ್ಲಿ ಕಾರಾಗೃಹದ ಬಂದಿಗಳಿಗೆ ಚರ್ಮ ವ್ಯಾಧಿ, ರಕ್ತದೊತ್ತಡ, ಮಧುಮೇಹ, ದಂತ, ಕಿವಿ ಸೇರಿದಂತೆ ಹಲವು ಸಾಮಾನ್ಯ ಕಾಯಿಲೆಗಳ ಕುರಿತು ತಪಾಸಣೆ ನಡೆಸಲಾಯಿತು. 8 ಮಹಿಳಾ ಕೈದಿಗಳು ಸೇರಿದಂತೆ ಒಟ್ಟು 208 ಕೈದಿಗಳು ತಪಾಸಣೆಗೆ ಒಳಗಾದರು.

ಡಾ.ದೇವಾನಂದ ಬಿರಾದಾರ, ಡಾ.ನಿವೇದಿತಾ ಬಿರಾದಾರ, ಡಾ.ಅಂಬರೇಶ ಪತ್ತಾರ, ಡಾ.ಗುಂಡುರಾವ್ ಪಾಟೀಲ, ಡಾ.ಪ್ರಜ್ವಲ್ ಮಾಲೀಪಾಟೀಲ ಮತ್ತು ಆಸ್ಪತ್ರೆ ಸಿಬ್ಬಂದಿ ಕೈದಿಗಳ ತಪಾಸಿಸಿ, ಔಷಧ ವಿತರಿಸಿದರು.

ಜೈಲಿನ ಪ್ರಭಾರ ಮುಖ್ಯ ಅಧೀಕ್ಷಕ ರಾಕೇಶ್ ಕಾಂಬಳೆ ಮಾತನಾಡಿದರು. ಸಹಾಯಕ ಅಧೀಕ್ಷಕ ಚನ್ನಪ್ಪ ಯಟಗಲ್, ಕಾರಾಗೃಹದ ವೈದ್ಯಾಧಿಕಾರಿಗಳಾದ ಡಾ.ಅರ್ಚನಾ ಹಾಗೂ ಡಾ.ರವೀಂದ್ರ ಬನ್ನೇರ, ಜೈಲು ಸಿಬ್ಬಂದಿ ಭೀಮಾಶಂಕರ್ ಡಾಂಗೆ, ಜೈಲರ್‌ಗಳಾದ ಸಾಗರ ಪಾಟೀಲ, ಪುಂಡಲೀಕ ಟಿ.ಕೆ, ಶ್ರೀಮಂತಗೌಡ ಪಾಟೀಲ, ಸಹಾಯಕ ಜೈಲರ್ ಡಿ ಮಹೇಶ್, ಶಿಕ್ಷಕ ನಾಗರಾಜ ಮುಲಗೆ ಸೇರಿದಂತೆ ಹಲವರಿದ್ದರು.

ಬುದ್ಧರ ತತ್ವ ಆದರ್ಶ ಪಾಲಿಸಿ

ಚಿಟಗುಪ್ಪ (ಹುಮನಾಬಾದ್): 'ಗೌತಮ್ ಬುದ್ಧರ ತತ್ವ ಆದರ್ಶಗಳು ಎಲ್ಲರೂ ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು' ಎಂದು ಶಾಸಕ ಡಾ. ಶೈಲೇಂದ್ರ ಬೆಲ್ದಾಳೆ ಹೇಳಿದರು. ತಾಲ್ಲೂಕಿನ ಚಾಂಗಲೇರಾ ಗ್ರಾಮದಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಯುವಕ ಸಂಘದ ವತಿಯಿಂದ ಆಯೋಜಿಸಿದ್ದ ಬುದ್ಧ ಜಯಂತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಗುರಿ ಹಾಗೂ ಶ್ರದ್ಧೆಯಿಂದ ಶ್ರಮಿಸಿದರೆ ಮಾತ್ರ ಯಶಸ್ಸು ಸಾಧ್ಯವಿದೆ. ಅಹಂಕಾರವನ್ನು ಬಿಟ್ಟು ಕರುಣೆ ಮತ್ತು ಪ್ರೀತಿಯಿಂದ ಸರಳ ಜೀವನ ನಡೆಸುವಂತೆ ಬುದ್ಧರ ಸಂದೇಶವನ್ನು ಪಾಲಿಸಬೇಕು ಎಂದರು.

ಭಂತೆ ಧಮ್ಮ ದೀಪ, ಶಿವಶರಣಪ್ಪ ಹುಗ್ಗಿ ಪಾಟೀಲ, ಬುದ್ಧ ಬೆಳಕು ಟ್ರಸ್ಟ್ ಅಧ್ಯಕ್ಷ ಮಹೇಶ ಗೋರನಾಳಕರ್ , ಡಾ. ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದ ವ್ಯವಸ್ಥಾಪ ಪ್ರೇಮಸಾಗರ ದಾಂಡೇಕರ್, ಹಣಮಂತರಾವ ಗೌಡಗಾಂವಕರ್, ಪಿಎಸ್‌ಐ ಸವಿತಾ, ಜೈಸಿಂಗ್ ರಾಠೋಡ, ಬಸವರಾಜ ಪವಾರ, ಸತೀಶ್ ಸಾಗರ, ಮಿಥುನ್ ವರ್ಮಾ, ಅರ್ಜುನ ಶರ್ಮಾ, ಪ್ರಕಾಶ ಪ್ರಸಾದ್ ಸೇರಿದಂತೆ ಇತರರು ಇದ್ದರು.

ವಿವಿಧ ಕಲೆಗಳಿಂದ ಮೆರಗುಗೊಂಡ ಜನಪ್ರಿಯ ಸಾಂಸ್ಕೃತಿಕ ಸಂಭ್ರಮೋತ್ಸವ



ಕಲಬುರಗಿ,ಮೇ.05-

ಕಲೆಗಳು ದೈನಂದಿನ ಜೀವನದ ಒತ್ತಡಗಳಿಂದ ಮುಕ್ತಿ ನೀಡುವುದಲ್ಲದೆ, ಸಮಾಜದಲ್ಲಿನ ಮಾನಸಿಕ ಒತ್ತಡವನ್ನು ಕಡಿಮೆ ಮಾಡುವಲ್ಲಿ ಮಹತ್ವದ ಪಾತ್ರವಹಿಸುತ್ತವೆ. ಇಂತಹ ಸಾಂಸ್ಕೃತಿಕ ಕಾರ್ಯಕ್ರಮಗಳು ಅತ್ಯಾವಶ್ಯಕವೆಂದು ಬಿಜೆಪಿ ಮಹಿಳಾ ಮೋರ್ಚಾ ದಕ್ಷಿಣ ವಲಯ ಕಲಬುರಗಿಯ ಅಧ್ಯಕ್ಷೆ ಜ್ಯೋತಿ ಪಾಟೀಲ್ ಅಭಿಪ್ರಾಯಪಟ್ಟರು.

ನಗರದ ರಂಗಾಯಣ ರಂಗಮಂದಿರದಲ್ಲಿ ಜನಪ್ರಿಯ ಸಾಂಸ್ಕೃತಿಕ ಕಲಾ ಸಂಘ, ಕಲಬುರಗಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು ಇವರ ಸಂಯುಕ್ತಾಶ್ರಯದಲ್ಲಿ ಆಯೋಜಿಸಲಾದ ''ಜನಪ್ರಿಯ ಸಾಂಸ್ಕೃತಿಕ ಸಂಭ್ರಮೋತ್ಸವ''ವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ ಚಲನಚಿತ್ರ ನಟ ಡಾ. ವಿಜಯಕುಮಾರ ಗೊತಗಿ ಮಾತನಾಡಿ, ಕಲೆಗಳು ಮನರಂಜನೆಯೊಂದಿಗೆ ಮನೋವಿಕಾಸಕ್ಕೂ ಪೂರಕವಾಗುತ್ತವೆ. ಕುಟುಂಬದ ಎಲ್ಲ ಸದಸ್ಯರೂ ಇಂತಹ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಮೂಲಕ ಸಾಂಸ್ಕೃತಿಕ ಮೌಲ್ಯಗಳನ್ನು ಬೆಳೆಸಿಕೊಳ್ಳಬೇಕು ಎಂದು ಹೇಳಿದರು.


ಖ್ಯಾತ ಚಲನಚಿತ್ರ ನಟ ಹಾಗೂ ಜನಪದ ಆಯುರ್ವೇದ ವೈದ್ಯರಾದ ಡಾ. ವೀಣಾ ಪಾಟೀಲ್ ಮಾತನಾಡಿ, ವಿದ್ಯಾರ್ಥಿಗಳು ಪಾಠದ ಜೊತೆಗೆ ಪಠ್ಯೇತರ ಚಟುವಟಿಕೆಗಳಲ್ಲೂ ಸಕ್ರಿಯವಾಗಿ ಭಾಗವಹಿಸಬೇಕು. ಕಲೆ, ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಸಮಾಜದಲ್ಲಿ ಹರಡುವ ಕಾರ್ಯವನ್ನು ಜನಪ್ರಿಯ ತಂಡ ಹಾಗೂ ಮಠಪತಿ ಕುಟುಂಬ ಶ್ಲಾಘನೀಯವಾಗಿ ಮಾಡುತ್ತಿದೆ ಎಂದು ಪ್ರಶಂಸಿಸಿದರು.

ಕಾರ್ಯಕ್ರಮದಲ್ಲಿ ರಂಗಕರ್ಮಿ ಕಲ್ಯಾಣಿ ಭಜಂತ್ರಿ ಅತಿಥಿಯಾಗಿ ಉಪಸ್ಥಿತರಿದ್ದರು. ಕಾರ್ಯಕ್ರಮಕ್ಕೆ ಶಾಂತಲಿಂಗಯ್ಯ ಎಸ್. ಮಠಪತಿ ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮದ ಅಂಗವಾಗಿ ಕು. ಅಕ್ಷರಾ ರಾಜಶೇಖರ ಅಣಕಲ್ ಅವರಿಂದ ಭರತನಾಟ್ಯ ಪ್ರದರ್ಶನ ಗಮನ ಸೆಳೆಯಿತು. ಬಳಿಕ ಬಸ್ಸಯ್ಯ ಬಿ. ಗುತ್ತೇದಾರರಿಂದ ಸುಗಮ ಸಂಗೀತ, ದತ್ತರಾಜ ಕಲ್ಲಶೆಟ್ಟಿ ಅವರ ತತ್ವಪದ ಗಾಯನ ಹಾಗೂ ಸೈದಪ್ಪ ಸಪ್ಪನಗೋಳ ಅವರ ಜನಪದ ಗಾಯನ ಪ್ರೇಕ್ಷಕರನ್ನು ರಂಜಿಸಿತು. ಅಶ್ವಿನಿ ಆರ್. ಮೂಲಗೆ ಅವರ ದಾಸವಾಣಿ ಗಾಯನ ಎಲ್ಲರ ಮನಸೆಳೆಯಿತು.

ಜನಪ್ರಿಯ ಸಂಗೀತ ಹಾಗೂ ನೃತ್ಯ ಶಾಲೆಯ ಮಕ್ಕಳಿಂದ ಜಾನಪದ ನೃತ್ಯ, ಶಾಸ್ತ್ರೀಯ ನೃತ್ಯ, ವಚನ ಗಾಯನ ಮತ್ತು ಭಕ್ತಿಗೀತೆಗಳಂತಹ ವೈವಿಧ್ಯಮಯ ಕಾರ್ಯಕ್ರಮಗಳು ಪ್ರದರ್ಶನಗೊಂಡು ಮೆಚ್ಚುಗೆ ಗಳಿಸಿತು. ಮನಸ್ವಿ ನೃತ್ಯ ತಂಡದ ಜಾನಪದ ನೃತ್ಯವೂ ವಿಶೇಷ ಆಕರ್ಷಣೆಯಾಯಿತು. ಎಲ್ಲಾ ಕಾರ್ಯಕ್ರಮಗಳಿಗೆ ಅವಧೂತ ಪಾಟೀಲ್ ತಬಲಾ ಸಾಥ್ ನೀಡಿದರು.

ಕಾರ್ಯಕ್ರಮವನ್ನು ಗಂಗೋತ್ರಿ ಮಠಪತಿ ನಿರೂಪಿಸಿದ್ದು, ವೇದಕಂಠ ವಂದಿಸಿದರು.

ಮೇ 19ರಂದು ಚಿತ್ರದುರ್ಗದಲ್ಲಿ ಬಿಎಸ್ ವೈ ಅಭಿಮಾನೋತ್ಸವ



ಕಲಬುರಗಿ,ಮೇ.05-

ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ಸಾರ್ವಜನಿಕ ಜೀವನದ 50ನೇ ವರ್ಷಾಚರಣೆ ಅಂಗವಾಗಿ ಮೇ 9ರಂದು ಬೆಳಗ್ಗೆ 11 ಗಂಟೆಗೆ ಚಿತ್ರದುರ್ಗದ ಹೊರವಲಯದ ಮಾದಾರ ಚನ್ನಯ್ಯ ಆವರಣದಲ್ಲಿ ''ಬಿಎಸ್‌ವೈ ಅಭಿಮಾನೋತ್ಸವ'' ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಬಿಜೆಪಿ ಜಿಲ್ಲಾಧ್ಯಕ್ಷ ಅಶೋಕ ಬಗಲಿ ತಿಳಿಸಿದ್ದಾರೆ.

ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಬೃಹತ್ ಕಾರ್ಯಕ್ರಮವನ್ನು ಪಕ್ಷಾತೀತವಾಗಿ ಆಯೋಜಿಸಲಾಗುತ್ತಿದ್ದು, ರಾಜ್ಯದ ವಿವಿಧ ಭಾಗಗಳಿಂದ 10 ಲಕ್ಷಕ್ಕೂ ಹೆಚ್ಚು ಜನರು ಭಾಗವಹಿಸುವ ನಿರೀಕ್ಷೆಯಿದೆ ಎಂದು ಹೇಳಿದರು.

ಕಲಬುರಗಿ ಜಿಲ್ಲೆಯ ಎಲ್ಲ ಒಂಬತ್ತು ವಿಧಾನಸಭಾ ಕ್ಷೇತ್ರಗಳಿಂದಲೂ ಸಾವಿರಾರು ಅಭಿಮಾನಿಗಳು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದು ತಿಳಿಸಿದರು.

ದಕ್ಷಿಣ ಭಾರತದಲ್ಲಿ ಬಿಜೆಪಿಯನ್ನು ಬಲಪಡಿಸಲು ಯಡಿಯೂರಪ್ಪ ಅವರು ಮಹತ್ವದ ಪಾತ್ರ ವಹಿಸಿದ್ದಾರೆ. ರಾಜ್ಯದಲ್ಲಿ ಪಕ್ಷವನ್ನು

ಅಧಿಕಾರಕ್ಕೆ ತರಲು ಶ್ರಮಿಸಿದ್ದು, ರೈತರ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕರಿಸಿ ಪ್ರತ್ಯೇಕ ರೈತ ಬಜೆಟ್ ಮಂಡಿಸಿದ ನಾಯಕರೆಂದು ಹೇಳಿದರು. ಕಲ್ಯಾಣ ಕರ್ನಾಟಕ ಭಾಗದೊಂದಿಗೆ ಅವರಿಗೆ ವಿಶೇಷ ನಂಟು ಇದೆ ಎಂದು ವಿವರಿಸಿದರು.

ಎಂಎಲ್ಸಿ ಶಶೀಲ್ ನಮೋಶಿ ಮಾತನಾಡಿ, ಕಲ್ಯಾಣ ಕರ್ನಾಟಕ ಮರುನಾಮಕರಣ, ನಂಜುಂಡಪ್ಪ ವರದಿ ಜಾರಿ, ಯಾದಗಿರಿ ಜಿಲ್ಲೆ ಘೋಷಣೆ, ವಿಮೋಚನಾ ದಿನಾಚರಣೆ ಪರಂಪರೆ ಮುಂದುವರಿಕೆ ಹಾಗೂ ನೂತನ ಅನುಭವ ಮಂಟಪ ನಿರ್ಮಾಣಕ್ಕೆ 500 ಕೋಟಿ ರೂ. ಅನುದಾನ ನೀಡಿದಂತಹ ಹಲವು ಕಾರ್ಯಗಳ ಮೂಲಕ ಈ ಭಾಗದ ಅಭಿವೃದ್ಧಿಗೆ ಅವರು ಕೊಡುಗೆ ನೀಡಿದ್ದಾರೆ ಎಂದು ಹೇಳಿದರು.

ಶಾಸಕರಾದ ಬಸವರಾಜ ಮತ್ತಿಮಡು, ಬಿ.ಜಿ. ಪಾಟೀಲ, ಡಾ. ಅವಿನಾಶ ಜಾಧವ, ಮಾಜಿ ಸಂಸದ ಡಾ. ಉಮೇಶ ಜಾಧವ, ಮಾಜಿ ಶಾಸಕರಾದ ದತ್ತಾತ್ರೇಯ ಪಾಟೀಲ ರೇವೂರ, ಅಮರನಾಥ ಪಾಟೀಲ, ಮುಖಂಡರಾದ ಶರಣಪ್ಪ ತಳವಾರ ಮಾತನಾಡಿದರು.

ಸುದ್ದಿಗೋಷ್ಠಿಯಲ್ಲಿ ಹರ್ಷಾನಂದ ಗುತ್ತೇದಾರ, ಅವ್ವಣ್ಣ ಮ್ಯಾಕೇರಿ, ಪರಸರೆಡ್ಡಿ ನಾಲವಾರ, ಶಿವರಾಜ ಪಾಟೀಲ ರದ್ದೇವಾಡಗಿ, ಲಿಂಗರಾಜ ಬಿರಾದಾರ ಇತರರು ಇದ್ದರು.

ನಿಮ್ಮೂರು ಸುದ್ದಿ

ಸಂಪಾದಕೀಯ

ವಿಜಯ್ ಅನಿರೀಕ್ಷಿತ ಗೆಲುವು- ದ್ರಾವಿಡ ದನಿ ಉಡುಗಿದ ದ್ಯೋತಕವೇ?



ತಮಿಳುನಾಡಿನ ಜನ ನಟ ವಿಜಯ್ ಅವರನ್ನು ಆಯ್ಕೆ ಮಾಡಿಕೊಂಡಿದ್ದಾರೆ. ಆ ಮೂಲಕ 1967ರಿಂದ ಆಳ್ವಿಕೆ ನಡೆಸಿದ ದ್ರಾವಿಡ ಪಕ್ಷಗಳನ್ನು ಹಿಂಬದಿಗೆ ಸರಿಸಿದ್ದಾರೆ. ಇದು ದ್ರಾವಿಡ ದನಿ ಉಡುಗಿದ ದ್ಯೋತಕವೇ ಇಲ್ಲ, ಮತ್ತೆ ಸಿನೆಮಾ-ರಾಜಕಾರಣ ಸಂಸ್ಕೃತಿಗೆ ತಲೆಬಾಗಿದ ಸಂಕೇತವೇ?

ನಾಲ್ಕು ರಾಜ್ಯಗಳು ಮತ್ತು ಒಂದು ಕೇಂದ್ರಾಡಳಿತ ಪ್ರದೇಶದ ಚುನಾವಣೆ ಫಲಿತಾಂಶ ಹೊರಬಿದ್ದಿದೆ. ಈ ಬಾರಿಯ ಚುನಾವಣೆಯಲ್ಲಿ ನಿಜಕ್ಕೂ ದೇಶದ ಜನರ ಕುತೂಹಲ ಕೆರಳಿಸಿದ್ದು ಪಶ್ಚಿಮ ಬಂಗಾಳ. ಆದರೆ, ಅಚ್ಚರಿಯ ಫಲಿತಾಂಶದ ಮೂಲಕ ದೇಶದ ಗಮನ ಸೆಳೆದದ್ದು ತಮಿಳುನಾಡು. ಎಕ್ಸಿಟ್ ಪೋಲ್ ನಲ್ಲಿ ಎಲ್ಲರೂ ಡಿಎಂಕೆ ಎಂದೇ ತೀರ್ಮಾನಿಸಿದ್ದರು. ಆಕ್ಸಿಸ್ ಮೈ ಇಂಡಿಯಾದವರು ಮಾತ್ರ ವಿಜಯ್ 98ರಿಂದ 120 ಸ್ಥಾನಗಳನ್ನು ಗೆಲ್ಲಲಿದ್ದಾರೆ ಎಂದಾಗ, ಅದು ಅತಿಶಯೋಕ್ತಿ ಎನಿಸಿತ್ತು. ಹೆಚ್ಚೆಂದರೆ 20-30 ಸೀಟ್ ಬರಬಹುದು. ಇಲ್ಲವೆಂದರೆ, ಕಿಂಗ್ ಮೇಕರ್ ಆಗಬಹುದು ಎನ್ನುವುದು ಎಲ್ಲರ ಅಂದಾಜು ಆಗಿತ್ತು. ಈಗ ನೋಡಿದರೆ ವಿಜಯ್ 108 ಸ್ಥಾನ ಗೆದ್ದು, ಅತಿ ದೊಡ್ಡ ಪಕ್ಷವಾಗಿ ಹೊರಹೊಮ್ಮಿದ್ದಾರೆ.

ತಮಿಳುನಾಡು ಹೇಳಿಕೇಳಿ ದ್ರಾವಿಡ ನೆಲ. ಪೆರಿಯಾರ್ ಅವರ ಶೂದ್ರಭೂಮಿ. ಅಲ್ಲಿ ದ್ರಾವಿಡ ಅಸ್ಮಿತೆಗೆ ಒತ್ತುಕೊಟ್ಟು ರಾಜಕಾರಣ ಮಾಡಿದ, 1967ರಿಂದ ಇಲ್ಲಿಯವರೆಗೆ ಆಳಿದ ಡಿಎಂಕೆ ಮತ್ತು ಅಣ್ಣಾಡಿಎಂಕೆಗಳದೇ ಪಾರುಪತ್ಯ. ಈ ಬಾರಿ ಆಡಳಿತಾರೂಢ ಡಿಎಂಕೆ, ಸೈದ್ಧಾಂತಿಕವಾಗಿ ಕೇಂದ್ರ ಸರ್ಕಾರದ ವಿರುದ್ಧವಿದ್ದರೆ; ಅಣ್ಣಾಡಿಎಂಕೆ ಅದೇ ಬಿಜೆಪಿಯೊಂದಿಗೆ ಮೈತ್ರಿ ಮಾಡಿಕೊಂಡಿತ್ತು. ತಮಿಳುನಾಡಿನ ಜಾಯಮಾನದಂತೆ, ಈ ಬಾರಿ ಅಣ್ಣಾಡಿಎಂಕೆ ಅಧಿಕಾರಕ್ಕೇರುವ ಕನಸು ಕಂಡಿತ್ತು. ಆದರೆ, ಮುಖ್ಯಮಂತ್ರಿ ಸ್ಟಾಲಿನ್, ಅಣ್ಣಾಡಿಎಂಕೆಯನ್ನೇ ಇಬ್ಭಾಗಿಸಿದ್ದರು. ಡಿಎಂಕೆಗೆ ಅನುಕೂಲಕರ ವಾತಾವರಣ ನಿರ್ಮಿಸಿಕೊಂಡಿದ್ದರು.

ಅದಕ್ಕೆ ಪೂರಕವಾಗಿ ನಟ ವಿಜಯ್‌ಗೆ ವಿರುದ್ಧವಾಗಿ ಸ್ಟಾಲಿನ್ ಪುತ್ರ, ಚಿತ್ರನಟ ಉದಯನಿಧಿ ಸ್ಟಾಲಿನ್ ಅವರನ್ನು ತಂದು ನಿಲ್ಲಿಸಿದ್ದರು. ಅವರ ಜನ ನಾಯಗನ್‌ಗೆ ವಿರುದ್ಧವಾಗಿ ಶಿವಶಕ್ತಿ ಚಿತ್ರ ನಿರ್ಮಿಸಿದ್ದರು. ಇತ್ತ ಬಿಜೆಪಿ ಕೂಡ, ಕರೂರು ಕಾಲ್ತುಳಿತ ಪ್ರಕರಣವನ್ನು ಸಿಬಿಐಗೆ ಒಪ್ಪಿಸಿ ವಿಚಾರಣೆಯ ಕಾಟ ಕೊಟ್ಟಿತ್ತು. ವಿಜಯ್ ಕೊನೆ ಚಿತ್ರ ಜನ ನಾಯಗನ್ ಬಿಡುಗಡೆಗೆ ಅಡ್ಡಿಪಡಿಸಿತ್ತು. ಸಾಲದು ಎಂದು, ಇದೇ ಸಂದರ್ಭದಲ್ಲಿ ವಿಜಯ್ ಪತ್ನಿ ವಿಚ್ಛೇದನ ಪಡೆಯುವ ಸುದ್ದಿ, ಸದ್ದು ಮಾಡಿತ್ತು. ಇವೆಲ್ಲವೂ ವಿಜಯ್ ಮಾನಸಿಕವಾಗಿ ಕುಗ್ಗುವಂತೆ ನೋಡಿಕೊಂಡವು. ರಾಜಕಾರಣಕ್ಕೆ ಸಮಯ ಕೊಡಲು, ಚುನಾವಣೆಯಲ್ಲಿ ಸಕ್ರಿಯವಾಗಿ ಭಾಗವಹಿಸಲು ತೊಡಕುಂಟುಮಾಡಿದವು.

ಆದರೆ, ಈ ಕಾಟಗಳು ಮತ್ತು ಕಾರಣಗಳೇ ವಿಜಯ್‌ಗೆ ಅನುಕೂಲಕರ ಹಾದಿ ನಿರ್ಮಿಸಿದವು. ವಿರೋಧಿಗಳ ನಿರೀಕ್ಷೆಯನ್ನು ಹುಸಿಗೊಳಿಸಿ, ಜೋಸೆಫ್ ಸಿ. ವಿಜಯ್ ಅವರ ಟಿವಿಕೆ 108 ಸ್ಥಾನಗಳನ್ನು ಗಳಿಸುವಂತೆ ನೋಡಿಕೊಂಡವು. ಹಾಗಾಗಿ ವಿಜಯ್ ಮುಖ್ಯಮಂತ್ರಿಯಾಗುವುದು ಖಾತ್ರಿಯಾಗಿದೆ. ಈಗ ತಮಿಳುನಾಡಿನಲ್ಲಷ್ಟೇ ಅಲ್ಲ, ಇಡೀ ದೇಶದಲ್ಲಿ ಈ ಅನಿರೀಕ್ಷಿತ ಗೆಲುವಿನ ಬಗ್ಗೆ ಚರ್ಚೆಯಾಗುತ್ತಿದೆ. ಟಿವಿಕೆ ಗೆಲುವಿನ ಹಿಂದಿರುವ ಕಾರಣಗಳನ್ನು ವಿಶ್ಲೇಷಿಸಲಾಗುತ್ತಿದೆ.

ತಮಿಳುನಾಡಿನ ರಾಜಕಾರಣವನ್ನು ಹತ್ತಿರದಿಂದ ಬಲ್ಲವರಿಗೆ ಸಹಜವಾಗಿಯೇ ಹಲವು ಕಾರಣಗಳು ಕಾಣಬಹುದು. ಅವುಗಳಲ್ಲಿ ಆರು ದಶಕಗಳಿಂದ ದ್ರಾವಿಡ ರಾಜಕಾರಣವನ್ನು, ಎರಡು ಪಕ್ಷಗಳ ನಡುವಿನ ಅಧಿಕಾರ ಹಂಚಿಕೆಯನ್ನು ಕಂಡ ತಮಿಳುನಾಡಿನ ಜನಕ್ಕೆ ಹೊಸ ಮುಖ ಬೇಕೆನ್ನಿಸಿರಬಹುದು. ಇದಕ್ಕೆ ಡಿಎಂಕೆಯ ಭ್ರಷ್ಟಾಚಾರ, ಕುಟುಂಬ ರಾಜಕಾರಣ, ದರ್ಪ-ದುರಂಹಕಾರದ ವರ್ತನೆ ಅಸಮಾಧಾನ ಹುಟ್ಟಿಸಿರಬಹುದು. ಟಿವಿಕೆ ಪಕ್ಷದ ಬಲವೇ ಅಭಿಮಾನಿಗಳು ಮತ್ತು ಯುವಜನತೆ. ರಾಜಕಾರಣದಿಂದ ದೂರ ಉಳಿದಿದ್ದ ಈ ವರ್ಗಕ್ಕೆ ಪರ್ಯಾಯ ರಾಜಕಾರಣ ಬೇಕೆನ್ನಿಸಿರಬಹುದು. ಅಭಿಮಾನಿಗಳನ್ನೇ ಪಕ್ಷದ ಕಾರ್ಯಕರ್ತರಂತೆ ಬಳಸಿದ ಎಂಜಿಆರ್ ಮತ್ತು ಜಯಲಲಿತಾ ಕಾಲದ ಮಾದರಿಯನ್ನು ವಿಜಯ್ ನಾಜೂಕಾಗಿ ಅಳವಡಿಸಿಕೊಂಡಿರಬಹುದು. ಹಾಗೆಯೇ ವಿಜಯ್, ಹೋದಲ್ಲಿ ಬಂದಲ್ಲಿ, ಅನುಭವಕ್ಕಿಂತ ಸ್ವಚ್ಛತೆ ಮುಖ್ಯ ಎಂದು ಒತ್ತಿ ಹೇಳುತ್ತ, ನಮಗೆ ಭ್ರಷ್ಟಾಚಾರದ ಅನುಭವವಿಲ್ಲ ಎಂಬ ಅವರ ಮಾತು ಝೆನ್ ಜಿ ವರ್ಗದವರನ್ನು ಸೆಳೆದಿರಬಹುದು. ಅದಕ್ಕಿಂತಲೂ ಹೆಚ್ಚಾಗಿ ಯುವಜನತೆಯನ್ನು ತಕ್ಷಣ ತಲುಪಬಲ್ಲ ಡಿಜಿಟಲ್ ಪ್ರಚಾರವನ್ನೇ ಪ್ರಬಲ ಅಸ್ತ್ರವನ್ನಾಗಿ ಬಳಸಿಕೊಂಡದ್ದು ಅನುಕೂಲವಾಗಿರಬಹುದು. ಚಿತ್ರಗಳಲ್ಲಿ ಸಾಮಾನ್ಯ ಜನರ ಪರ ಹೋರಾಡುವ ನಾಯಕನಾಗಿ ಕಡೆದು ನಿಲ್ಲಿಸಿದ್ದ ವಿಜಯ್ ಇಮೇಜ್, ರಾಜಕೀಯದಲ್ಲೂ ಕೆಲಸ ಮಾಡಿರಬಹುದು. ತಮಿಳುನಾಡಿನ ಸಿನೆಮಾ-ರಾಜಕೀಯ ಸಂಸ್ಕೃತಿಯಲ್ಲಿ ಇದು ಬಹುದೊಡ್ಡ ಪಾತ್ರ ವಹಿಸಿರಬಹುದು.

60ರ ದಶಕದಲ್ಲಿಯೇ ಸಿನೆಮಾ ಕ್ಷೇತ್ರದಿಂದ ರಾಜಕಾರಣಕ್ಕೆ ಬಂದ ಕರುಣಾನಿಧಿ, 19 ವರ್ಷಗಳ ಕಾಲ ತಮಿಳುನಾಡನ್ನು ಆಳಿದ್ದರು. ಇವರ ನಂತರ ಬಂದ ಜನಪ್ರಿಯ ನಟ ಎಂಜಿಆರ್, 10 ವರ್ಷಗಳ ಕಾಲ ಮುಖ್ಯಮಂತ್ರಿಯಾಗಿ ಮೆರೆದರು. ಎಂಜಿಆರ್ ಪ್ರೇಯಸಿಯಾದ ಜಯಲಲಿತಾ, ಅವರ ನಿಧನಾನಂತರ ರಾಜಕಾರಣಕ್ಕೆ ಬಂದು 14 ವರ್ಷಗಳ ಕಾಲ ತಮಿಳುನಾಡನ್ನು ಆಳಿ ಅಮ್ಮನಾಗಿ ಚರಿತ್ರೆಯ ಪುಟಗಳಲ್ಲಿ ದಾಖಲಾದರು. ಅಂದರೆ, ತಮಿಳುನಾಡಿನ ಜನಜೀವನದಲ್ಲಿ ಸಿನೆಮಾ ಬೆರೆತುಹೋಗಿದೆ. ಚಿತ್ರರಂಗದ ನಟ-ನಟಿಯರು ನಾಯಕರಾಗಿ ಹೊರಹೊಮ್ಮಿ, ರಾಜಕಾರಣಕ್ಕೆ ಬಂದು ರಾಜ್ಯವಾಳಿರುವ ಇತಿಹಾಸವಿದೆ. ಇದನ್ನು ಅರಿತು ಅರಗಿಸಿಕೊಂಡಿರುವ ವಿಜಯ್, 2016ರಲ್ಲಿ ನಿಧನರಾದ ಜಯಲಲಿತಾ ನಂತರದ 10 ವರ್ಷಗಳ ನಾಯಕರ ನಿರ್ವಾತವನ್ನು ಜಾಣ್ಮೆಯಿಂದ ತುಂಬಿದ್ದಾರೆ. ತಮ್ಮದನ್ನಾಗಿಸಿಕೊಂಡಿದ್ದಾರೆ.

ಇಲ್ಲಿ ಗಮನಿಸಬೇಕಾದ ಮುಖ್ಯ ಸಂಗತಿ ಎಂದರೆ, ತಮಿಳುನಾಡು ಎಂದರೆ ಶೂದ್ರರ ನಾಡು. ಬ್ರಾಹ್ಮಣ್ಯವನ್ನು ಪ್ರಬಲವಾಗಿ ವಿರೋಧಿಸಿದ ಪೆರಿಯಾರ್ ಅವರ ದ್ರಾವಿಡ ಬೀಡು. ಈ ಸೈದ್ಧಾಂತಿಕ ಬುನಾದಿಯ ಮೇಲೆ ಪಕ್ಷ ಕಟ್ಟಿ ಆಳ್ವಿಕೆ ಮಾಡಿದ ಅಣ್ಣಾ ದೊರೈ ಮತ್ತು ಕರುಣಾನಿಧಿ, ದ್ರಾವಿಡ ಅಸ್ಮಿತೆಯನ್ನು ಉಳಿಸಿ ಬೆಳೆಸಿದವರು. ಆದರೆ, ಅದೇ ಹಾದಿಯಲ್ಲಿ ಬಂದ ಎಂಜಿಆರ್ ಮತ್ತು ಜಯಲಲಿತಾ ಕಾಲಕ್ಕೆ ದ್ರಾವಿಡ ಅಸ್ಮಿತೆ ದುರ್ಬಲಗೊಂಡಿತ್ತು. ಸ್ಟಾಲಿನ್ ಮತ್ತು ಪಳನಿಸ್ವಾಮಿಯವರ ಕಾಲಕ್ಕೆ ಅದು ಗೋಡೆ ಮೇಲಿನ ಪೋಸ್ಟರ್‌ಗಳಿಗೆ ಸೀಮಿತವಾಗಿತ್ತು. ಅದರಲ್ಲೂ ಕಳೆದ ಐದು ವರ್ಷಗಳ ಸ್ಟಾಲಿನ್ ಆಡಳಿತದಲ್ಲಿ, ಸನಾತನಿಗಳ ವಿರುದ್ಧ ಸಡ್ಡುಹೊಡೆದು ನಿಂತರೂ, ಅದು ಅವಕಾಶವಾದಿ ರಾಜಕಾರಣವಾಗಿ ಕಂಡಿತ್ತು. ಇದರಿಂದ ಬೇಸತ್ತ ಹೊಸಗಾಲದ ಯುವಜನತೆಗೆ ಹಿಂದುತ್ವದ ಬಿಜೆಪಿ(ಅಣ್ಣಾಡಿಎಂಕೆ)ಯೂ ಬೇಡ, ದ್ರಾವಿಡ ಸಂಸ್ಕೃತಿ ಸಾರುವ ಡಿಎಂಕೆಯೂ ಬೇಡವೆನಿಸಿರಬಹುದು. ತಮಿಳುನಾಡಿನ ಜನಕ್ಕೂ ಈಗ ದ್ರಾವಿಡ ಅಸ್ಮಿತೆಯ ಬದಲಿಗೆ ತಮಿಳು ಅಸ್ಮಿತೆ ಮುಖ್ಯವಾಗಿರಬಹುದು. ಜಾತಿ-ಧರ್ಮ-ವರ್ಗ ಮೀರಿ ವಿಜಯ್ ಅವರನ್ನು ಆಯ್ಕೆ ಮಾಡಿಕೊಂಡಿರಬಹುದು.

ನಟ ವಿಜಯ್ ಅವರನ್ನು ಆಯ್ಕೆ ಮಾಡಿಕೊಂಡಿರುವ ತಮಿಳುನಾಡಿನ ಜನ, ನಟಿ ತ್ರಿಷಾ ಅವರನ್ನು ಆಗಲೇ ಜಯಲಲಿತಾ ಜಾಗದಲ್ಲಿ ಕಲ್ಪಿಸಿಕೊಳ್ಳುತ್ತಿದ್ದಾರೆ. ತ್ರಿಷಾ ವಿಜಯ್ ಮನೆಯಲ್ಲಿ ನಿನ್ನೆ ಕಾಣಿಸಿಕೊಂಡದ್ದನ್ನು ಸೋಷಿಯಲ್ ಮೀಡಿಯಾದಲ್ಲಿ ಹಂಚಿಕೊಳ್ಳುತ್ತಿದ್ದಾರೆ. ಹಾಗೇನಾದರೂ ಆದರೆ, ತಮಿಳುನಾಡಿಗೆ ಮತ್ತೊಂದು ಎಂಜಿಆರ್-ಜಯಲಲಿತಾ ಜೋಡಿ ದಕ್ಕಿದಂತಾಗುತ್ತದೆ. ಆ ಜೋಡಿಯ 24 ವರ್ಷಗಳ ಆಳ್ವಿಕೆ, ತಮಿಳುನಾಡಿನ ಅಭಿವೃದ್ಧಿ ಎಲ್ಲವೂ ತಮಿಳರಿಗೆ ತಿಳಿದಿದೆ. ಆದರೂ ಈಗ ಮತ್ತದೇ ಸಿನೆಮಾ-ರಾಜಕಾರಣಕ್ಕೆ ತಮಿಳುನಾಡು ತಲೆಬಾಗಿದೆ. ಬದಲಾವಣೆ ಬಯಸಿರುವ ತಮಿಳರ ಆಯ್ಕೆಯನ್ನು ಸ್ವಾಗತಿಸೋಣ, ವಿಜಯ್ ಅವರ ಆಡಳಿತವನ್ನು ಕಾದುನೋಡೋಣ.

ಕೂದಲೆಳೆ ಅಂತರದ ಗೆಲುವು : ಸಮರ್ಥ ಮತಗಳಿಲ್ಲದೆಯೂ ಗೆದ್ದ ಸಮರ್ಥ

ರಾಜ್ಯದ ಗಮನ ಸೆಳೆದಿದ್ದ ದಾವಣಗೆರೆ ದಕ್ಷಿಣ ವಿಧಾನಸಭಾ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಸಮರ್ಥ ಶಾಮನೂರು 4,873 ಮತಗಳ ಅಂತರದಿಂದ ಗೆಲುವು ಸಾಧಿಸಿದ್ದಾರೆ. ಫಲಿತಾಂಶದಿಂದ ಮತ್ತೊಮ್ಮೆ ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರ ಶಾಮನೂರು ಕುಟುಂಬದ ಕೈವಶವಾಗಿದೆ. ಕಾಂಗ್ರೆಸ್ ಪಕ್ಷಕ್ಕೆ ಪಾಠವೂ ಆಗಿದೆ.

ಹಲವು ವಿರೋಧ ಮತ್ತು ಗೊಂದಗಳಿಂದಲೇ ನಡೆದ ಚುನಾವಣೆಯಲ್ಲಿ ಕೊನೆಗೂ ಪ್ರಯಾಸಪಟ್ಟು ಸಮರ್ಥ ಶಾಮನೂರು ಕುದಲೆಳೆ ಅಂತರದಲ್ಲಿ ಗೆಲುವಿನ ನಗೆ ಬೀರಿದ್ದಾರೆ. ಗೆಲಿವಿಗಾಗಿ ಬೆವರು ಹರಿಸಿದ್ದಾರೆ. ಲಿಂಗಾಯತ ಮತ್ತು ಕುರುಬ ಸಮುದಾಯದ ಮತಗಳು ವಿಭಜನೆಯಾಗದೆ ಕಾಂಗ್ರೆಸ್ ಪಾಲಾಗಿರುವುದು ಹಾಗೂ ಕ್ಷೇತ್ರದಲ್ಲಿ ಶಾಮನೂರು ಕುಟುಂಬದ ಮೇಲಿನ ಅನುಕಂಪ ಕೈಹಿಡಿದಿದೆ. ಮುಸ್ಲಿಂ ಸಮುದಾಯದ ಸಾಂಪ್ರದಾಯಿಕ ಮತಗಳು ಸಹ ಬಹುಮಟ್ಟಿಗೆ ಕಾಂಗ್ರೆಸ್ ಪರವಾಗಿದ್ದು, ಸುಮಾರು ಶೇ.70 ರಷ್ಟು ಸಾಂಪ್ರದಾಯಿಕ ಮತಗಳು ಛಿದ್ರವಾಗದೆ ಇರುವುದು ಕಾಂಗ್ರೆಸ್ ಗೆಲುವಿಗೆ ಸಹಕಾರಿಯಾಗಿವೆ.

21ನೇ ಸುತ್ತಿನ ಮತ ಎಣಿಕೆ ಅಂತ್ಯಕ್ಕೆ ಕಾಂಗ್ರೆಸ್ ಅಭ್ಯರ್ಥಿ ಸಮರ್ಥ ಶಾಮನೂರು 68,619 ಮತಗಳನ್ನು ಪಡೆದು 4,873 ಮತಗಳ ಅಂತರದಲ್ಲಿ ಪ್ರಯಾಸದಲ್ಲಿ ಗೆಲುವಿನ ದಡ ಸೇರಿದ್ದರು. ಬಿಜೆಪಿ ಅಭ್ಯರ್ಥಿ ಶ್ರೀನಿವಾಸ್ ದಾಸ್ ಕರಿಯಪ್ಪ 63,746 ಮತಗಳನ್ನು ಪಡೆದರೆ, ಎಸ್‌ಡಿಪಿಐ ಅಭ್ಯರ್ಥಿ ಅಪ್ಸರ್ ಕೊಡ್ಲಿಪೇಟೆ 18,485 ಮತಗಳನ್ನು ಗಳಿಸಿದ್ದಾರೆ. ಆಡಳಿತ ಪಕ್ಷದ ಪ್ರಚಾರ ತಂತ್ರಗಳು ಕೈ ಹಿಡಿದಿದೆ. ಬಿಜೆಪಿಯೂ ಪ್ರಬಲ ಪೈಪೋಟಿ ನೀಡುವ ಮೂಲಕ ಪರಾಭವಗೊಂಡಿದೆ. ಎಸ್ ಡಿಪಿಐ ಕಾಂಗ್ರೆಸ್ ಮತ ಬ್ಯಾಂಕ್‌ಗೆ ಲಗ್ಗೆ ಇಟ್ಟು, ಗೆಲುವಿನ ಅಂತರ ಇಳಿಸಿದೆ. ಈ ಫಲಿತಾಂಶ ಎಲ್ಲಾರಿಗೂ ಆತ್ಮವಲೋಕನಕ್ಕೆ ಒಳಗು ಮಾಡಿರುವುದಂತೂ ಸತ್ಯ.



4,873 ಮತಗಳ ಅಂತರದಿಂದ ಗೆಲುವು ಸಾಧಿಸಿರುವ ಸಮರ್ಥ ಶಾಮನೂರು, 27 ನೇ ವಯಸ್ಸಿಗೆ ನಿರಾಯಸವಾಗಿ ಶಾಸನ ಸಭೆ ಪ್ರವೇಶಿಸಿದ್ದಾರೆ. ಅದರೆ ತಂದೆ ಹಾಲಿ ಮಂತ್ರಿಯಾಗಿ, ತಾತನ ಧೀರ್ಘಕಾಲದ ರಾಜಕೀಯ ಹಿಡಿತ ಮತ್ತು ಆಡಳಿತ ಪಕ್ಷದ ಅಭ್ಯರ್ಥಿಯಾದರು ಗೆಲ್ಲಲೂ ಹರಸಾಹಸಪಟ್ಟಿದ್ದಾರೆ. ತೋಳು ಬಲ, ಅಧಿಕಾರದ ಬಲ, ಹಣ ಬಲವಿದ್ದರೆ ಏನು ಬೇಕಾದರೂ ಮಾಡಬಹುದು ಎಂಬ ಹುಂಬತನಕ್ಕೆ, ಇದೆಲ್ಲ ನಡೆಯುವುದಿಲ್ಲ ಎಂಬ ಸಂದೇಶ ಸಾರಿದಂತಿದೆ ಈ ಬಾರಿಯ ಫಲಿತಾಂಶ ಎಂದು ವಿಶ್ಲೇಷಿಸಲಾಗುತ್ತಿದೆ. ಮುಸ್ಲಿಂ ಸಮುದಾಯ ಪಕ್ಷನಿಷ್ಠೆ ಪ್ರದರ್ಶಿಸಿದೆ. ಹಾಗಾಗಿ ಕಾಂಗ್ರೆಸ್ ಗೆಲುವಿನ ದಡ ಸೇರಿದೆ ಎನ್ನುತ್ತಾರೆ ಸ್ಥಳೀಯರು.

ಅಜ್ಜನ ಜೊತೆಗೆ ಹೆಜ್ಜೆ ಹಾಕಿದ್ದ ಕಾಂಗ್ರೆಸ್ ಹಿರಿಯ ನಾಯಕ ಸಾದಿಕ್ ಪೈಲ್ವಾನ್ ತ್ಯಾಗದಿಂದ ಅಜ್ಜನ ರಾಜಕೀಯ ಗದ್ದುಗೆಗೆ ಮೊಮ್ಮಗ ಉತ್ತರಾಧಿಯಾಗಿದ್ದಾರೆ ಎಂದು ವಿಶ್ಲೇಷಿಸಲಾಗುತ್ತಿದೆ. ದಾವಣಗೆರೆ ದಕ್ಷಿಣ ಫಲಿತಾಂಶ, ರಾಜಕೀಯದ ಲೆಕ್ಕಚಾರಗಳನ್ನೇ ಬುಡಮೇಲು ಮಾಡಿದೆ. ಅಖಂಡ ಮುಸ್ಲಿಂ ಸಮುದಾಯದ ತ್ಯಾಗ ಮತ್ತು ನಿಷ್ಠೆಯನ್ನು ಗಣನೆಗೆ ತೆಗೆದುಕೊಂಡು ಫಲಿತಾಂಶವನ್ನು ನೋಡಲಾಗುತ್ತಿದೆ. ಶಾಮನೂರು ಕುಟುಂಬದ ಮೇಲಿನ ಅನುಕಂಪದ ಅಲೆ ಮತದಾರರಲ್ಲಿ ಸ್ಪಷ್ಟವಾಗಿ ಕಾಣಿಸಿಕೊಂಡಿದ್ದು, ಅದು ಕಾಂಗ್ರೆಸ್ ಪರವಾಗಿ ಕೆಲಸ ಮಾಡಿದೆ. ಇದರ ಜೊತೆಗೆ ಸಿಎಂ ಸಿದ್ದರಾಮಯ್ಯ ಮತ್ತು ಡಿಸಿಎಂ ಡಿ.ಕೆ. ಶಿವಕುಮಾರ್ ಪ್ರಚಾರ ಹಾಗೂ ಪ್ರಬಲ ಮುಸ್ಲಿಂ ಅಭ್ಯರ್ಥಿಯಾಗಿದ್ದ ಸಾದಿಕ್ ಪೈಲ್ವಾನ್ ಕಣದಿಂದ ಹಿಂದೆ ಸರಿದಿರುವುದು ಕೂಡ ಕಾಂಗ್ರೆಸ್ ಅಭ್ಯರ್ಥಿಗೆ ಗೆಲುವಿನ ದಾರಿ ಸುಗಮಗೊಳಿಸಿವೆ.

ಒಟ್ಟಾರೆ ಕಾಂಗ್ರೆಸ್ ಸಾಂಪ್ರದಾಯಿಕ ಮತ ಬ್ಯಾಂಕ್ ಗೆ ಎಸ್ ಡಿಪಿಐ ಕೈ ಹಾಕಿದೆ. 18,485 ಸಾವಿರ ಮತಗಳನ್ನು ಪಡೆಯುವ ಮೂಲಕ ಕಾಂಗ್ರೆಸ್ ಗೆಲುವಿನ ಅಂತರ ಕಡಿಮೆ ಮಾಡಿದೆ. ವಸತಿ ಸಚಿವ ಜಮೀರ್ ಅಹಮದ್, ಮುಖ್ಯಮಂತ್ರಿ ಮಾಜಿ ರಾಜಕೀಯ ಕಾರ್ಯದರ್ಶಿ ನಸೀರ್ ಅಹಮದ್, ಅಬ್ದುಲ್ ಜಬ್ಬಾರ್ ಸೇರಿದಂತೆ ಹಲವು ಹಿರಿಯ ನಾಯಕರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೆ ಇರುವುದು ಗೆಲುವಿನ ಅಂತರ ಕಡಿಮೆಯಾಗಲು ಕಾರಣ ಎನ್ನಲಾಗುತ್ತಿದೆ. ಈ ಎಲ್ಲದರಿಂದ ಕಾಂಗ್ರೆಸ್ ಪಾಠ ಕಲಿಯಬೇಕಿದೆ. ಮುಸ್ಲಿಂ ಸುಮುದಾಯದ ದೊಡ್ಡ ಫಲಾನುಭವಿಯಾದ ಕಾಂಗ್ರೆಸ್ ಪಕ್ಷ ಮುಂದೆಯಾದರೂ ಆ ಸಮುದಾಯಕ್ಕೆ ಕೃತಜ್ಞತೆಯಿಂದ ನಡೆದುಕೊಳ್ಳಬೇಕಿದೆ.

ಜೋಸೆಫ್ ವಿಜಯ್ ಗೆಲುವಿನ ಅಸಲಿ ಸೀಕ್ರೆಟ್ ಇಲ್ಲಿದೆ!

ತಮಿಳುನಾಡು ರಾಜಕೀಯ ಎಂದರೆ ಅಲ್ಲಿ ಕೇವಲ ಅಧಿಕಾರಕ್ಕಾಗಿ ಹೋರಾಟ ನಡೆಯುವುದಿಲ್ಲ, ಅದೊಂದು ಸಿದ್ಧಾಂತ ಮತ್ತು ಬಣ್ಣದ ಲೋಕದ ಅದ್ಭುತ ಸಮ್ಮಿಲನ. ದ್ರಾವಿಡ ನೆಲದಲ್ಲಿ ಸಿನಿಮಾ ಮತ್ತು ರಾಜಕೀಯಕ್ಕೆ ಬೇರ್ಪಡಿಸಲಾಗದ ಒಂದು ನಂಟಿದೆ. ಈ ಪರಂಪರೆಯಲ್ಲಿ ಎಂ.ಜಿ. ರಾಮಚಂದ್ರನ್, ಎಂ. ಕರುಣಾನಿಧಿ ಮತ್ತು ಜೆ. ಜಯಲಲಿತಾ ಅವರಂತಹ ಮಹಾನ್ ನಾಯಕರು ಜನಮಾನಸದಲ್ಲಿ ದೈವಸಮಾನವಾಗಿ ನಿಂತವರು. ಈಗ ಅದೇ ಹಾದಿಯಲ್ಲಿ ನಟ ಜೋಸೆಫ್ ವಿಜಯ್ ತಮ್ಮ ತಮಿಳಗ ವೆಟ್ರಿ ಕಳಗಂ () ಪಕ್ಷದ ಮೂಲಕ ಭರ್ಜರಿ ಎಂಟ್ರಿ ಕೊಟ್ಟು, ತಮಿಳುನಾಡು ರಾಜಕೀಯದ ಚಿತ್ರಣವನ್ನೇ ಬದಲಿಸಿದ್ದಾರೆ. ಜೋಸೆಫ್ ವಿಜಯ್ ಅವರ ಟಿವಿಕೆ ಪಕ್ಷ ಸರಳ ಬಹುಮತ ಸಾಧಿಸಿ ಸರ್ಕಾರ ರಚಿಸಲು 10 ಶಾಸಕರ ಬೆಂಬಲ ಬೇಕು. ಈ ಯಶಸ್ಸಿನ ಹಿಂದೆ ಅವರ ಸ್ಟಾರ್‌ಡಮ್ ಮಾತ್ರವಲ್ಲದೆ ಜನರು ಮತ್ತು ಎರಡೂ ಪಕ್ಷದಿಂದ ಬೇಸತ್ತಿದ್ದರು ಅನ್ನೋದಕ್ಕೆ ಈ ಜನಾದೇಶವೇ ಸಾಕ್ಷಿ. ಹಾಗೇಯೇ ಟಿವಿಕೆ ಪಕ್ಷ ಘೋಷಿಸಿದ ಆಕರ್ಷಕ ಚುನಾವಣಾ ಪ್ರಣಾಳಿಕೆಗಳು ಜೋಸೆಫ್ ವಿಜಯ್ ಗೆಲುವಿನ ಹಾದಿಯನ್ನ ಸುಲಭ ಮಾಡಿದೆ.

ಇನ್ನು ತಮಿಳುನಾಡಿನ ರಾಜಕೀಯದಲ್ಲಿ ದಶಕಗಳಿಂದ ಬೇರೂರಿದ್ದ ಪ್ರಮುಖ ದ್ರಾವಿಡ ಪಕ್ಷಗಳ ಏಕಸ್ವಾಮ್ಯವನ್ನು ಈ ಹೊಸ ಪಕ್ಷದ ಗೆಲುವು ಮುರಿದುಹಾಕಿದೆ ಎಂದು ವಿಶ್ಲೇಷಿಸಲಾಗುತ್ತಿದೆ. ಭ್ರಷ್ಟಾಚಾರ, ವಂಶಪಾರಂಪರ್ಯ ರಾಜಕಾರಣ ಮತ್ತು ಸದ್ಯಕ್ಕೆ ಇರುವ ಹಳೆಯ ರಾಜಕೀಯ ವ್ಯವಸ್ಥೆಯನ್ನು ಕೊನೆಗಾಣಿಸಬೇಕು ಎಂಬ ಜನರ ಇಚ್ಛೆಗೆ ಈ ಫಲಿತಾಂಶ ಸಾಕ್ಷಿಯಾಗಿದೆ. ದಕ್ಷ ಆಡಳಿತ ನೀಡುವ ಈ ಮೆಗಾ ಸ್ಟಾರ್ ಅವರ ಭರವಸೆಯನ್ನು ಮತದಾರರು ಪೂರ್ಣವಾಗಿ ಒಪ್ಪಿಕೊಂಡಿದ್ದಾರೆ. ಪ್ರಸ್ತುತ ಸರ್ಕಾರದ ವಿರುದ್ಧವಿದ್ದ ಒಂದು ಆಡಳಿತ ವಿರೋಧಿ ಅಲೆಯು ಈ ನಟ-ರಾಜಕಾರಣಿಯನ್ನು ಗೆಲುವಿನ ಸಮೀಪಕ್ಕೆ ಕೊಂಡೊಯ್ದಿದೆ. ಸದ್ಯದ ಪರಿಸ್ಥಿತಿಯಲ್ಲಿ ಬಿಜೆಪಿಯನ್ನು ಅಧಿಕಾರದಿಂದ ದೂರ ಇಡುವ ಉದ್ದೇಶದಿಂದ ಕಾಂಗ್ರೆಸ್, ವಿಸಿಕೆ () ಮತ್ತು ಎಡಪಕ್ಷಗಳು ಟಿವಿಕೆ () ಪಕ್ಷಕ್ಕೆ ಹೊರಗಿನಿಂದ ಬೆಂಬಲ ನೀಡಲು ಮುಂದೆ ಬರುವ ಸಾಧ್ಯತೆಗಳಿವೆ. ಇದು ಈಗ ರಾಜಕೀಯ ವಲಯದಲ್ಲಿ ತೀವ್ರ ಚರ್ಚೆಗೆ ಕಾರಣವಾಗಿದೆ.

ಇನ್ನು ''10 ರೂಪಾಯಿ ಮಂತ್ರಿ'' ಅಂತ ಕುಖ್ಯಾತಿ ಗಳಿಸಿದ ಡಿಎಂಕೆ ಸೆಂಥಿಲ್ ಬಾಲಾಜಿ ಅವರ ವಿರುದ್ಧ ಇರುವ ಭ್ರಷ್ಟಾಚಾರದ ಆರೋಪ. ಡಿಎಂಕೆ ಪಕ್ಷದ ಪ್ರಭಾವಿ ನಾಯಕ ವಿ. ಸೆಂಥಿಲ್ ಬಾಲಾಜಿ ಈ ಹಿಂದೆ ಎಐಎಡಿಎಂಕೆ ಸರ್ಕಾರದಲ್ಲಿ ಸಾರಿಗೆ ಸಚಿವರಾಗಿದ್ದ ಅವಧಿಯಲ್ಲಿ (2011-2015), ಸಾರಿಗೆ ಇಲಾಖೆಯಲ್ಲಿ ಉದ್ಯೋಗ ಕೊಡಿಸುವುದಾಗಿ ನೂರಾರು ಅಭ್ಯರ್ಥಿಗಳಿಂದ ಕೋಟ್ಯಂತರ ರೂಪಾಯಿ ಲಂಚ ಪಡೆದಿದ್ದಾರೆ ಎಂಬ ಗಂಭೀರ ಆರೋಪವಿದೆ. ವರ್ಗಾವಣೆ ಅಥವಾ ನೇಮಕಾತಿಗಾಗಿ ಪ್ರತಿಯೊಂದಕ್ಕೂ ನಿಗದಿತ ಕಮಿಷನ್ ದರ ಇತ್ತು ಎಂಬ ಕಾರಣಕ್ಕೆ ವಿರೋಧ ಪಕ್ಷದವರು ಇವರನ್ನು ''10 ರೂಪಾಯಿ ಮಂತ್ರಿ'' ಎಂದು ಲೇವಡಿ ಮಾಡುತ್ತಾರೆ. ಈ ಹಗರಣಕ್ಕೆ ಸಂಬಂಧಿಸಿದ ಹಣ ವರ್ಗಾವಣೆ ಪ್ರಕರಣದಲ್ಲಿ ಇಡಿ ಅಧಿಕಾರಿಗಳು ಬಾಲಾಜಿ ಅವರನ್ನು ಬಂಧಿಸಿ ದೀರ್ಘಕಾಲ ನ್ಯಾಯಾಂಗ ಬಂಧನದಲ್ಲಿ ಇರಿಸಿದ್ದರು. ಇಡಿ ದಾಳಿಯ ಸಮಯದಲ್ಲಿ ಹಗರಣಕ್ಕೆ ಸಂಬಂಧಿಸಿದ ಅನೇಕ ಡಿಜಿಟಲ್ ಪುರಾವೆಗಳು ಮತ್ತು ಹಣಕಾಸಿನ ವಹಿವಾಟಿನ ಡೈರಿಗಳು ಪತ್ತೆಯಾಗಿದ್ದವು. ಬಂಧನದ ನಂತರವೂ ಅವರು ದೀರ್ಘಕಾಲ ಸಚಿವರಾಗಿ ಮುಂದುವರಿದಿದ್ದು ತಮಿಳುನಾಡಿನಲ್ಲಿ ದೊಡ್ಡ ಮಟ್ಟದ ರಾಜಕೀಯ ಮತ್ತು ಕಾನೂನು ಹೋರಾಟಕ್ಕೆ ಕಾರಣವಾಗಿತ್ತು. ಒಬ್ಬ ಸಚಿವರ ಮೇಲೆ ಇಷ್ಟು ದೊಡ್ಡ ಮಟ್ಟದ ಭ್ರಷ್ಟಾಚಾರದ ಆರೋಪ ಬಂದಿರುವುದು ಡಿಎಂಕೆ ಸರ್ಕಾರದ ಆಡಳಿತದ ಮೇಲೂ ಕಪ್ಪು ಚುಕ್ಕೆಯಾಗಿ ಪರಿಣಮಿಸಿತ್ತು.

ಇದೆಲ್ಲಾ ಒಂದು ಕಡೆ ಆದ್ರೆ, ಈಗ ಉದ್ಭವಿಸುವ ಪ್ರಮುಖ ಪ್ರಶ್ನೆ ಪ್ರಣಾಳಿಕೆಗಳ ಬಗ್ಗೆ. ಜೋಸೆಫ್ ವಿಜಯ್ ಪಕ್ಷ ಆಶ್ವಾಸನೆ ಕೊಟ್ಟಿರುವಂತೆ ಎಲ್ಲಾ ಪಕ್ಷಗಳೂ ಆಶ್ವಾಸನೆ ಕೊಟ್ಟಿವೆ. ''ಇವೆಲ್ಲವೂ ಹೊಸದೇನೂ ಅಲ್ವಲ್ಲ?'' ಎಂಬುದೇ ಈಗ ಉದ್ಭವಿಸಿರುವ ಪ್ರಶ್ನೆ. ಚುನಾವಣೆಯ ಹೊಸ್ತಿಲಲ್ಲಿ ಆಮಿಷಗಳು, ಭರವಸೆಗಳ ಮಹಾಪೂರ ಹರಿಸುವುದು ದಶಕಗಳಿಂದ ನಡೆದು ಬಂದಿರುವ ರಾಜಕೀಯ ಸಂಪ್ರದಾಯ.

ನಟ ಜೋಸೆಫ್ ವಿಜಯ್ ಅವರು ಸಮಾಜದ ಪ್ರತಿಯೊಂದು ವರ್ಗವನ್ನೂ ತಲುಪುವ ಉದ್ದೇಶದಿಂದ ಅತ್ಯಂತ ಜನಪ್ರಿಯ ಯೋಜನೆಗಳನ್ನು ಘೋಷಿಸಿದ್ದರು. ಅವುಗಳಲ್ಲಿ ಮುಖ್ಯವಾದವುಗಳೆಂದರೆ:

ಶಿಕ್ಷಣ ಮತ್ತು ನಿರುದ್ಯೋಗಕ್ಕೆ ಮದ್ದು: ಪದವಿ ಪಡೆದು ಉದ್ಯೋಗವಿಲ್ಲದೆ ಅಲೆಯುತ್ತಿರುವ ಯುವಕರಿಗೆ ಮಾಸಿಕ ₹2,500 ರಿಂದ ₹4,000 ವರೆಗೆ ಭತ್ಯೆ ನೀಡುವ ಭರವಸೆ ನೀಡಲಾಗಿದೆ. ಇದರೊಂದಿಗೆ 50 ಲಕ್ಷ ಹೊಸ ಉದ್ಯೋಗ ಸೃಷ್ಟಿಯ ಗುರಿ ಹಾಗೂ ಶಿಕ್ಷಣಕ್ಕಾಗಿ ₹20 ಲಕ್ಷದವರೆಗೆ ಸಾಲ ಸೌಲಭ್ಯದ ಆಶ್ವಾಸನೆ ನೀಡಲಾಗಿದೆ.



ಮಹಿಳಾ ಸಬಲೀಕರಣ: ಪ್ರತಿ ಕುಟುಂಬಕ್ಕೆ ವರ್ಷಕ್ಕೆ ಆರು ಉಚಿತ ಎಲ್‌ಪಿಜಿ ಸಿಲಿಂಡರ್, ಪ್ರತಿ ವಧುವಿಗೆ ಒಂದು ಪೌಂಡ್ ಚಿನ್ನ ಮತ್ತು ರೇಷ್ಮೆ ಸೀರೆಯಂತಹ ಜನಪ್ರಿಯ ಯೋಜನೆಗಳನ್ನು ಘೋಷಿಸಲಾಗಿದೆ. ಇದು ತಮಿಳುನಾಡಿನ ಸಾಂಪ್ರದಾಯಿಕ ಉಚಿತ ಕೊಡುಗೆ () ರಾಜಕೀಯಕ್ಕೆ ಸಾಕ್ಷಿಯಾಗಿದೆ.

ರೈತರಿಗೆ ಮತ್ತು ಕೃಷಿಗೆ ಆದ್ಯತೆ: ಸಣ್ಣ ರೈತರ (5 ಎಕರೆಗಿಂತ ಕಡಿಮೆ ಭೂಮಿ ಹೊಂದಿರುವವರು) ಸಂಪೂರ್ಣ ಬೆಳೆ ಸಾಲ ಮನ್ನಾ ಮತ್ತು ಕಬ್ಬು ಬೆಳೆಗಾರರಿಗೆ ಪ್ರತಿ ಟನ್‌ಗೆ ₹4,500 ಕನಿಷ್ಠ ಬೆಂಬಲ ಬೆಲೆ ಘೋಷಿಸುವ ಮೂಲಕ ಗ್ರಾಮೀಣ ಮತದಾರರನ್ನು ಸೆಳೆಯುವಲ್ಲಿ ಜೋಸೆಫ್ ವಿಜಯ್ ಯಶಸ್ವಿಯಾಗಿದ್ದಾರೆ.

ಆರೋಗ್ಯ ಮತ್ತು ಸಾಮಾಜಿಕ ಸುಧಾರಣೆ: ಪ್ರತಿ ಕುಟುಂಬಕ್ಕೆ ₹25 ಲಕ್ಷದವರೆಗೆ ಆರೋಗ್ಯ ವಿಮೆ ಮತ್ತು ತಮಿಳುನಾಡನ್ನು ಮಾದಕ ವಸ್ತು ಮುಕ್ತ ರಾಜ್ಯವನ್ನಾಗಿ ಮಾಡುವ ಸಂಕಲ್ಪ ಮಾಡಲಾಗಿದೆ.

ಭರವಸೆಗಳ ಅಸಲಿಯತ್ತು: ಹೊಸದೇನೂ ಇಲ್ಲದ ಹಳೇ ಹಾದಿ?

ರಾಜಕೀಯ ಪಕ್ಷಗಳ ಪ್ರಣಾಳಿಕೆಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ, ಒಂದಿಲ್ಲೊಂದು ರೀತಿಯಲ್ಲಿ ಇವು ಹಳೆಯ ಯೋಜನೆಗಳ ಮರುಜಾರಿಯಂತೆ ಕಾಣುತ್ತವೆ. ನಿರುದ್ಯೋಗ ಭತ್ಯೆ, ಉಚಿತ ಅಡುಗೆ ಅನಿಲ, ಮತ್ತು ರೈತರ ಸಾಲ ಮನ್ನಾ ಇವು ಭಾರತದ ಬಹುತೇಕ ಚುನಾವಣೆಗಳಲ್ಲಿ ಕಾಮನ್ ಆಗಿ ಕೇಳಿಬರುವ ಅಂಶಗಳು. ಜೋಸೆಫ್ ವಿಜಯ್ ಅವರ ಈ ಮ್ಯಾನಿಫೆಸ್ಟೋ ಕೂಡ ಇದಕ್ಕಿಂತ ಭಿನ್ನವಾಗಿಲ್ಲ ಎಂಬುದು ರಾಜಕೀಯ ವಿಶ್ಲೇಷಕರ ಅಭಿಪ್ರಾಯ.

ದ್ರಾವಿಡ ಪಕ್ಷಗಳಾದ ಡಿಎಂಕೆ ಮತ್ತು ಎಐಎಡಿಎಂಕೆ ದಶಕಗಳಿಂದ ಇಂತಹದ್ದೇ ಗಿಮಿಕ್‌ಗಳ ಮೂಲಕ ಜನರ ಮುಂದೆ ಹೋಗುತ್ತಿವೆ. ಮಿಕ್ಸಿ, ಗ್ರೈಂಡರ್, ಲ್ಯಾಪ್‌ಟಾಪ್‌ಗಳಿಂದ ಹಿಡಿದು ಉಚಿತ ಅಕ್ಕಿಯವರೆಗೆ ಎಲ್ಲವನ್ನೂ ತಮಿಳುನಾಡು ರಾಜಕೀಯ ಕಂಡಿದೆ. ಹೀಗಿರುವಾಗ, ಜೋಸೆಫ್ ವಿಜಯ್ ಅವರ ಭರವಸೆಗಳು ಕೇವಲ ''ಹಳೆಯ ಮದ್ಯ ಹೊಸ ಸೀಸೆಯಲ್ಲಿ'' ಬಂದಂತಿದೆ ಎಂಬ ಟೀಕೆಯೂ ಇದೆ. ಆದರೆ, ಈ ಭರವಸೆಗಳನ್ನೇ ಜನರು ನಂಬಿ ಮತ ಚಲಾಯಿಸಿದ್ದಾರೆ ಎಂದರೆ, ಇಂದಿಗೂ ಜನಸಾಮಾನ್ಯರ ಮೂಲಭೂತ ಸಮಸ್ಯೆಗಳು ಹಾಗೆಯೇ ಇವೆ ಎಂಬುದು ಸ್ಪಷ್ಟವಾಗುತ್ತದೆ.

ಈಡೇರಿಸುವಲ್ಲಿರುವ ಸವಾಲುಗಳೇನು?

ಘೋಷಣೆ ಮಾಡುವುದು ಸುಲಭ, ಆದರೆ ಅಧಿಕಾರಕ್ಕೆ ಬಂದ ಮೇಲೆ ಅವುಗಳನ್ನು ಜಾರಿಗೆ ತರುವುದು ಬೆಟ್ಟವನ್ನು ಉರುಳಿಸಿದಷ್ಟೇ ಕಷ್ಟದ ಕೆಲಸ. ಜೋಸೆಫ್ ವಿಜಯ್ ಅವರ ಪ್ರಣಾಳಿಕೆಯನ್ನು ಜಾರಿಗೆ ತರಲು ಸಾವಿರಾರು ಕೋಟಿ ರೂಪಾಯಿಗಳ ಬಜೆಟ್ ಅಗತ್ಯವಿದೆ. ಈಗಾಗಲೇ ಸಾಲದ ಸುಳಿಯಲ್ಲಿರುವ ತಮಿಳುನಾಡಿನಂತಹ ರಾಜ್ಯಕ್ಕೆ 50 ಲಕ್ಷ ಉದ್ಯೋಗ ಸೃಷ್ಟಿ ಮತ್ತು ಭಾರೀ ಪ್ರಮಾಣದ ಸಬ್ಸಿಡಿಗಳನ್ನು ನೀಡುವುದು ಆರ್ಥಿಕವಾಗಿ ದೊಡ್ಡ ಹೊರೆಯಾಗಲಿದೆ.

ಜೋಸೆಫ್ ವಿಜಯ್ ರಾಜಕೀಯಕ್ಕೆ ಸಂಪೂರ್ಣವಾಗಿ ಹೊಸಬರು. ಸಿನಿಮಾ ಸುಲ್ತಾನನಾಗಿ ತೆರೆಯ ಮೇಲೆ ಸಮಸ್ಯೆಗಳನ್ನು ಕ್ಷಣಾರ್ಧದಲ್ಲಿ ಬಗೆಹರಿಸುವ ದೃಶ್ಯಗಳಿಗೂ, ಆಡಳಿತಾತ್ಮಕವಾಗಿ ಜಟಿಲವಾದ ಸಮಸ್ಯೆಗಳನ್ನು ನಿಭಾಯಿಸುವುದಕ್ಕೂ ಬಹಳ ವ್ಯತ್ಯಾಸವಿದೆ. ಹತ್ತು ಶಾಸಕರ ಬೆಂಬಲದೊಂದಿಗೆ ಸರ್ಕಾರ ರಚಿಸುವುದು ಸವಾಲಿನ ಸಂಗತಿ. ಇಲ್ಲಿ ಒಕ್ಕೂಟ ರಾಜಕೀಯದ ಒತ್ತಡಗಳು ಜೋಸೆಫ್ ವಿಜಯ್ ಅವರ ನಿರ್ಧಾರಗಳ ಮೇಲೆ ಪ್ರಭಾವ ಬೀರಬಹುದು. ಭ್ರಷ್ಟಾಚಾರ ಮುಕ್ತ ಆಡಳಿತ ನೀಡುವುದಾಗಿ ಅವರು ಹೇಳಿದ್ದರೂ, ವ್ಯವಸ್ಥೆಯಲ್ಲಿನ ಹಳೇ ಬೇರುಗಳನ್ನು ಕಿತ್ತೊಗೆಯುವುದು ಅಷ್ಟು ಸುಲಭವಲ್ಲ.

ದಶಕಗಳಿಂದ ಸೂಪರ್ ಸ್ಟಾರ್ ರಜನಿಕಾಂತ್ ರಾಜಕೀಯಕ್ಕೆ ಬರುತ್ತಾರೆಂಬ ನಿರೀಕ್ಷೆಯಲ್ಲಿದ್ದ ಅಭಿಮಾನಿಗಳಿಗೆ ಕೊನೆಯಲ್ಲಿ ನಿರಾಸೆಯಾಯಿತು. ಕಮಲ್ ಹಾಸನ್ ಪಕ್ಷ ಕಟ್ಟಿದರೂ ಅದು ಚುನಾವಣೆಯಲ್ಲಿ ದೊಡ್ಡ ಮಟ್ಟದ ಪ್ರಭಾವ ಬೀರಲಿಲ್ಲ. ಆದರೆ ಜೋಸೆಫ್ ವಿಜಯ್ ಅವರ ವಿಚಾರದಲ್ಲಿ ವಿಷಯ ಬೇರೆಯೇ ಇತ್ತು. ಜೊಸೆಫ್ ವಿಜಯ್ ತಮ್ಮ ತಂದೆಯ ರಾಜಕೀಯ ನೆರಳಿನಿಂದ ಹೊರಬಂದು, ಯುವ ಸಮೂಹವನ್ನು ಸಂಘಟಿಸಿ, ನೇರವಾಗಿ ಮೈದಾನಕ್ಕೆ ಇಳಿದರು. ಸಿನಿಮಾ ಸ್ಟಾರ್‌ಡಮ್ ಅನ್ನು ಅವರು ಕೇವಲ ಗ್ಲಾಮರ್‌ಗಾಗಿ ಬಳಸದೆ, ಒಂದು ವ್ಯವಸ್ಥಿತವಾದ ಕಾರ್ಯಕರ್ತರ ಪಡೆಯಾಗಿ ಪರಿವರ್ತಿಸಿದರು. ತಮಿಳುನಾಡಿನ ಯುವಕರು ಇಂದು ಬದಲಾವಣೆಯನ್ನು ಬಯಸುತ್ತಿದ್ದಾರೆ. ಕರುಣಾನಿಧಿ ಮತ್ತು ಜಯಲಲಿತಾ ಅವರ ನಂತರದ ಶೂನ್ಯವನ್ನು ತುಂಬಲು ಒಬ್ಬ ಬಲಿಷ್ಠ ನಾಯಕನ ಹುಡುಕಾಟದಲ್ಲಿರುವ ಜನರಿಗೆ ಜೋಸೆಫ್ ವಿಜಯ್ ಆಶಾದೀಪದಂತೆ ಕಂಡಿದ್ದಾರೆ.

ಸದ್ಯಕ್ಕೆ ತಮಿಳುನಾಡಿನ ಮತದಾರರು ಜೋಸೆಫ್ ವಿಜಯ್ ಅವರ ಮೇಲೆ ನಂಬಿಕೆಯಿಟ್ಟು ಮತ ನೀಡಿದ್ದಾರೆ. ಆದರೆ ಇತಿಹಾಸವನ್ನು ಗಮನಿಸಿದರೆ, ಅನೇಕ ನಾಯಕರು ಚುನಾವಣಾ ಪ್ರಣಾಳಿಕೆಯನ್ನು ಕೇವಲ ಮತ ಗಳಿಸುವ ಕಾಗದದ ಚೂರು ಎಂಬಂತೆ ಬಳಸಿದ್ದಾರೆ. ಜೋಸೆಫ್ ವಿಜಯ್ ಅವರು ಘೋಷಿಸಿರುವ ಎಲ್ಲಾ ಯೋಜನೆಗಳನ್ನು ಈಡೇರಿಸಲು ಸಾಧ್ಯವೇ? ₹25 ಲಕ್ಷದ ಆರೋಗ್ಯ ವಿಮೆ ಅಥವಾ 50 ಲಕ್ಷ ಉದ್ಯೋಗ ಎಂಬುದು ಕೇವಲ ಅಂಕಿಅಂಶಗಳ ಆಟವೇ ಎಂಬ ಅನುಮಾನಗಳು ಜನರ ಮನಸ್ಸಲ್ಲಿ ಸಹಜವಾಗಿಯೇ ಇವೆ.

ಜೋಸೆಫ್ ವಿಜಯ್ ಹೇಳಿದಂತೆ ಇದು ಕೇವಲ ಆರಂಭವಷ್ಟೇ, ಅಸಲಿ ಪಿಕ್ಚರ್ ಇನ್ನು ಮುಂದೆ ಬರಲಿದೆ. ಈ ಪಿಕ್ಚರ್‌ನಲ್ಲಿ ಜೋಸೆಫ್ ವಿಜಯ್ ಒಬ್ಬ ಯಶಸ್ವಿ ನಾಯಕನಾಗಿ ಹೊರಹೊಮ್ಮುತ್ತಾರಾ ಅಥವಾ ಕೇವಲ ಒಬ್ಬ ರಾಜಕಾರಣಿಯಾಗಿ ಉಳಿಯುತ್ತಾರಾ ಎಂಬುದು ಕಾಲವೇ ನಿರ್ಧರಿಸಬೇಕು. ತಮಿಳುನಾಡಿನ ಮಣ್ಣಿನಲ್ಲಿ ಸಿನಿಮಾ ಮತ್ತು ರಾಜಕೀಯದ ಈ ಹೊಸ ಅಧ್ಯಾಯ ಕುತೂಹಲಕಾರಿಯಾಗಿದೆ. ಜೋಸೆಫ್ ವಿಜಯ್ ಅವರ ಗೆಲುವು ಕೇವಲ ವ್ಯಕ್ತಿಗತ ಯಶಸ್ಸಲ್ಲ, ಅದು ಪ್ರಸ್ತುತ ಇರುವ ರಾಜಕೀಯ ವ್ಯವಸ್ಥೆಯ ಮೇಲಿನ ಜನರ ಅಸಮಾಧಾನದ ಪ್ರತಿರೂಪ ಕೂಡ ಹೌದು. ಭರವಸೆಗಳ ಮಹಾಪೂರ ಹರಿಸಿರುವ ದಳಪತಿ, ಈ ಸವಾಲುಗಳ ಸಮುದ್ರವನ್ನು ಹೇಗೆ ದಾಟುತ್ತಾರೆ ಮತ್ತು ತಮ್ಮ ಮ್ಯಾನಿಫೆಸ್ಟೋಗೆ ಹೇಗೆ ಜೀವ ತುಂಬುತ್ತಾರೆ ಎಂಬುದನ್ನು ಇಡೀ ದೇಶ ಕಾತರದಿಂದ ಗಮನಿಸುತ್ತಿದೆ. ಅವರ ಆಡಳಿತವು ಕೇವಲ ಘೋಷಣೆಗಳಿಗೆ ಸೀಮಿತವಾಗದೆ, ಜನಸಾಮಾನ್ಯರ ಬದುಕಿನಲ್ಲಿ ಹೊಸ ಬದಲಾವಣೆ ತರಲಿ ಎಂಬುದು ಎಲ್ಲರ ಆಶಯ.

Printed and Published by: SUNDAR and Owned by: SUNDAR Printed at: SHILPA PUBLICATIONS AND PRINTING PRESS, No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Published at: No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Editor: SUNDAR